# ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961

## ವಿಷಯಾನುಕ್ರಮಣಿಕೆ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ವಿನಾಯಿತಿಗಳು

**ಅಧ್ಯಾಯ II**

**ಕಾರ್ಯಸಂಸ್ಥೆಗಳ ನೋಂದಣಿ**

4. ಕಾರ್ಯಸಂಸ್ಥೆಗಳ ನೋಂದಣಿ
5. ಪರಿಶೀಲಕನಿಗೆ ಬದಲಾವಣೆಯನ್ನು ತಿಳಿಸುವುದು
6. ಕಾರ್ಯಸಂಸ್ಥೆಯನ್ನು ಮುಚ್ಚುವ ಬಗ್ಗೆ ಪರಿಶೀಲಕನಿಗೆ ತಿಳಿಸುವುದು

6ಎ. ನೇಮಕ ಆದೇಶಗಳನ್ನು ನೀಡುವುದು

**ಅಧ್ಯಾಯ III**

**ಕೆಲಸದ ಗಂಟೆಗಳು**

7. ದೈನಂದಿನ ಮತ್ತು ವಾರದ ಗಂಟೆಗಳು
8. ಅಧಿಕಕಾಲಿಕ ಕೆಲಸಕ್ಕಾಗಿ ಹೆಚ್ಚಿನ ಮಜೂರಿಗಳು
9. ವಿಶ್ರಾಂತಿಗಾಗಿ ಬಿಡುವು
10. ಹರವು
11. ತೆರೆಯುವ ಮತ್ತು ಮುಚ್ಚುವ ವೇಳೆಗಳು
12. ವಾರದ ರಜಾ ದಿವಸಗಳು
13. ಮುಚ್ಚುವ ವೇಳೆಗಳ ತರುವಾಯ ಕಾರ್ಯಸಂಸ್ಥೆಗಳ ಹೊರಗಡೆ ಮಾರಾಟ ನಿಷೇಧ

**ಅಧ್ಯಾಯ IV**

**ಮಜೂರಿ ಸಹಿತ ವಾರ್ಷಿಕ ರಜೆ**

14. ಅಧ್ಯಾಯದ ಅನ್ವಯ
15. ಮಜೂರಿಗಳ ಸಹಿತ ವಾರ್ಷಿಕ ರಜೆ
16. ರಜಾ ಅವಧಿಯಲ್ಲಿ ಮಜೂರಿಗಳು
17. ಕೆಲವು ಸಂದರ್ಭಗಳಲ್ಲಿ ಮುಂಗಡ ಸಂದಾಯ
18. ಸಂದಾಯ ಮಾಡದಿರುವ ಮಜೂರಿಗಳ ವಸೂಲಿಯ ವಿಧಾನ
19. ನಿಯಮಗಳ ರಚನಾಧಿಕಾರ
20. ಕಾರ್ಯಸಂಸ್ಥೆಗಳನ್ನು ವಿನಾಯಿತಿಗೊಳಿಸಲು ಅಧಿಕಾರ

**ಅಧ್ಯಾಯ V**

**ಮಜೂರಿಗಳು ಮತ್ತು ನಷ್ಟಪರಿಹಾರ**


21. ಮಜೂರಿಗಳ ಸಂದಾಯ ಅಧಿನಿಯಮದ ಅನ್ವಯ
22. ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ ಅನ್ವಯ
23. ಬಿಟ್ಟುಬಿಡಲಾಗಿದೆ.


**ಅಧ್ಯಾಯ VI**

**ಮಕ್ಕಳ ಮತ್ತು ಮಹಿಳೆಯರ ನಿಯೋಜನೆ**


24. ಮಕ್ಕಳ ನಿಯೋಜನೆಯ ನಿಷೇಧ
25. ರಾತ್ರಿ ವೇಳೆಯಲ್ಲಿ ಮಹಿಳೆಯರ ನಿಯೋಜನೆಯ ನಿಯಂತ್ರಣ


**ಅಧ್ಯಾಯ VII**

**ಜಾರಿ ಮತ್ತು ಪರಿಶೀಲನೆ**


26. ಪರಿಶೀಲಕರು
27. ಪರಿಶೀಲಕರ ಅಧಿಕಾರಗಳು ಮತ್ತು ಕರ್ತವ್ಯಗಳು
28. ಪರಿಶೀಲಕರು ಲೋಕ ನೌಕರರಾಗಿರುತ್ತಾರೆ
29. ಪರಿಶೀಲನೆಗಾಗಿ ನಿಯೋಜಕರು ರಿಜಿಸ್ಟರುಗಳು, ದಾಖಲೆಗಳು ಇತ್ಯಾದಿಗಳನ್ನು ಹಾಜರುಪಡಿಸತಕ್ಕದ್ದು.


**ಅಧ್ಯಾಯ VIII**

**ಅಪರಾಧಗಳು, ದಂಡನೆಗಳು ಮತ್ತು ಪ್ರಕ್ರಿಯೆ**


30. ದಂಡನೆಗಳು
31. ಪ್ರಕ್ರಿಯೆ
32. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ
33. ಪರಿಶೀಲಕರು ಮುಂತಾದವರನ್ನು ಅಡ್ಡಿಪಡಿಸಿದ್ದಕ್ಕಾಗಿ ದಂಡನೆ

33ಎ. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದು


**ಅಧ್ಯಾಯ IX**

**ಸಂಕೀರ್ಣ**


34. ರಿಜಿಸ್ಟರುಗಳು ಮತ್ತು ದಾಖಲೆಗಳ ನಿರ್ವಹಣೆ ಮತ್ತು ನೋಟೀಸ್‌ಗಳನ್ನು ಪ್ರದರ್ಶಿಸುವುದು
35. ಕೆಲವು ಹಕ್ಕುಗಳು ಮತ್ತು ವಿಶೇಷಾಧಿಕಾರಗಳ ಉಳಿಸುವಿಕೆ
36. ರಕ್ಷಣೆ
37. ಅಧಿಕಾರಗಳ ಪ್ರತ್ಯಾಯೋಜನೆ
38. ಜಾತ್ರೆಗಳು ಮತ್ತು ಹಬ್ಬಗಳ ಕಾಲದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅಮಾನತ್ತಿನಲ್ಲಿಡುವುದಕ್ಕೆ ಸರ್ಕಾರದ ಅಧಿಕಾರ
39. ವಜಾ ನೋಟೀಸು
40. ನಿಯಮ ರಚನಾಧಿಕಾರ
41. ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು
42. ನಿರಸನ ಮತ್ತು ಉಳಿಸುವಿಕೆಗಳು

43. ಕೇಂದ್ರ ಅಧಿನಿಯಮ, 1942 ರ XVIIIರ ನಿರಸನ
44. ತೊಂದರೆಗಳನ್ನು ನಿವಾರಿಸಲು ಅಧಿಕಾರ
ಅನುಸೂಚಿ

****

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1962ರ ಅಧಿನಿಯಮ 8.-** ಪ್ರಸ್ತುತ ಮದ್ರಾಸು ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳು ಅಧಿನಿಯಮ, 1947 ಮದ್ರಾಸು ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ. ಮೈಸೂರು ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳು ಅಧಿನಿಯಮ, 1948, ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ. ಹೈದರಾಬಾದ್ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳು ಅಧಿನಿಯಮ 1957, ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ ಮತ್ತು ಮುಂಬಯಿ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳು ಅಧಿನಿಯಮ, 1948 ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ. ಮೈಸೂರು ರಾಜ್ಯದಲ್ಲಿ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳಲ್ಲಿ ಕೆಲಸ ಮತ್ತು ನಿಯೋಜನೆಯ ನಿಬಂಧನೆಗಳ ಮತ್ತು ಷರತ್ತುಗಳ ವಿನಿಯಮನಕ್ಕಾಗಿ ಏಕರೂಪದ ಕಾನೂನನ್ನು ತರುವುದು ವಿಹಿತವೆಂದು ಪರಿಗಣಿಸಲಾಗಿದೆ. ಭಾರತ ಸರ್ಕಾರವು, ರಾಜ್ಯ ಸರ್ಕಾರಗಳ ಪರ್ಯಾಲೋಚನೆಗಾಗಿ ಕರಡು ವಿಧೇಯಕವನ್ನು ಕಳುಹಿಸಿದ್ದು, ಅದೇ ರೀತಿಯಲ್ಲಿ ಅವಶ್ಯಕವಾಗಿರುವ ಕಡೆಗಳಲ್ಲಿ ಸಂಬಂಧಿಸಿದ ಶಾಸನ ರಚನೆಯನ್ನು ಮಾಡಬೇಕೆಂದು ತಿಳಿಸಿದೆ. ಈ ವಿಧೇಯಕದ ರೀತಿಯಲ್ಲಿ ಶಾಸನವನ್ನು ಅಧಿನಿಯಮಿತಗೊಳಿಸಿದಾಗ ಈ ಎರಡು ಉದ್ದೇಶಗಳೂ ಈಡೇರುತ್ತವೆ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV 2ಎ ದಿನಾಂಕ 12ನೇ ಫೆಬ್ರುವರಿ 1959ರಲ್ಲಿ ಸಂಖ್ಯೆ 2653; ಪುಟ 32ರಲ್ಲಿ ಪ್ರಕಟವಾಗಿದೆ.)

**II**

**1966ರ ತಿದ್ದುಪಡಿ ಅಧಿನಿಯಮ 36.-** ಅಧಿನಿಯಮದ 39ನೇ ಪ್ರಕರಣದ (2)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ, ಸೇವೆಯಿಂದ ತೆಗೆದುಹಾಕಿದ ಅಥವಾ ವಜಾಗೊಳಿಸಿದ ನಿಯೋಜಿತರುಗಳ ಎಲ್ಲಾ ಅಪೀಲುಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರವನ್ನು ನಿಯಮಿಸದಿರುವಲ್ಲಿ, ಕಾರ್ಮಿಕ ಆಯುಕ್ತರಿಗೆ ಸಲ್ಲಿಸುವುದು. ಇಡೀ ರಾಜ್ಯಕ್ಕೆ ಕೇವಲ ಒಂದೇ ಒಂದು ಅಪೀಲು ಪ್ರಾಧಿಕಾರ ಇರುವುದಾದರೆ, ಅದು, ವ್ಯವಹರಿಸುವ ಅಪೀಲುಗಳಿಗೆ ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳಿಗೆ ಹೆಚ್ಚು ತೊಂದರೆ ಮತ್ತು ಅನಾನುಕೂಲತೆಯುಂಟಾಗುತ್ತದೆ. ಯಾವ ಪ್ರದೇಶಗಳಿಂದ ಹಾಗೆ ಅಪೀಲುಗಳು ಉದ್ಭವಿಸುತ್ತವೆಯೋ ಆ ಪ್ರದೇಶಗಳ ಮತ್ತು ಕಾರ್ಯಸಂಸ್ಥೆಗೆ ಅನ್ವಯವಾಗುವ ವರ್ಗದ ಅಥವಾ ಪ್ರವರ್ಗಗಳ ಮೇಲೆ ಅವಲಂಬಿಸಿ, ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಪ್ರಾಧಿಕಾರಗಳಿಗೆ ಅಪೀಲುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸುವುದಕ್ಕೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಅಲ್ಲದೆ, 39(2)ನೇ ಪ್ರಕರಣದ ಮೇರೆಗೆ ಕಾರ್ಮಿಕ ಆಯುಕ್ತರ ಮುಂದೆ ಇತ್ಯರ್ಥದಲ್ಲಿರುವ ಸಮುಚಿತ ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳನ್ನು ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಸಹ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಎ ದಿನಾಂಕ 22ನೇ ನವೆಂಬರ್ 1966ರ ಪುಟ 4ರಲ್ಲಿ ಸಂಖ್ಯೆ 193 ಎಂದು ಪ್ರಕಟಗೊಂಡಿದೆ.)

**III**

**1969ರ ತಿದ್ದುಪಡಿ ಅಧಿನಿಯಮ 4.-** ಮೈಸೂರು ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ ಮೇರೆಗೆ, ಪರಿಶೀಲಕರಾಗಿ ನೇಮಕವಾಗಿರುವ ಕಾರ್ಮಿಕ ಪರಿಶೀಲಕರ ಕಾರ್ಯದ ಮೇಲ್ವಿಚಾರಣೆಯನ್ನು, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳಿಂದ ಮಾಡಿಸುವುದಕ್ಕೆ, ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ. ಸಹಾಯಕ ಕಾರ್ಮಿಕ ಆಯುಕ್ತರನ್ನು ಮತ್ತು ಕಾರ್ಮಿಕ ಅಧಿಕಾರಿಗಳನ್ನು ಸದರಿ ಅಧಿನಿಯಮದ ಮೇರೆಗೆ ಪರಿಶೀಲಕರನ್ನಾಗಿ ನೇಮಿಸದ ಹೊರತು, ಇದನ್ನು ಮಾಡಲು ಸಾಧ್ಯವಿಲ್ಲ. ಅಧಿನಿಯಮದ ಮೇರೆಗೆ ಹೆಚ್ಚುವರಿ ಪರಿಶೀಲಕರನ್ನು ನೇಮಿಸುವುದಕ್ಕೆ ಅವಕಾಶವಿರುವುದಿಲ್ಲ ಮತ್ತು ಅಂಥ ನೇಮಕಾತಿಗಳಿಗಾಗಿ ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ.

ಮೈಸೂರು ಪ್ರಸೂತಿ ಸೌಕರ್ಯ ಅಧಿನಿಯಮ, 1959 ನಿರಸಿತವಾಗಿದ್ದು, ಪ್ರಸೂತಿ ಸೌಕರ್ಯ ಅಧಿನಿಯಮ, 1961ನ್ನು (1961ರ ಕೇಂದ್ರ ಅಧಿನಿಯಮ 53) ಜಾರಿಗೆ ತರಲಾಗಿದೆ. ಆದ್ದರಿಂದ, ಯುಕ್ತ ರೀತಿಯಲ್ಲಿ ಅಧಿನಿಯಮದ ಅಧ್ಯಾಯ V ಅನ್ನು ತಿದ್ದುಪಡಿ ಮಾಡುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

(ಕಾನೂನು 81 ಎಲ್‌ಜಿಎನ್ 67 ರ ಕಡತದಿಂದ ಪಡೆಯಲಾಗಿದೆ.)

**IV**

**1982ರ ತಿದ್ದುಪಡಿ ಅಧಿನಿಯಮ 33.-** ಹಣಕಾಸು ಸಚಿವರು, 1982-83ನೇ ಸಾಲಿನ ತಮ್ಮ ಆಯವ್ಯಯ ಭಾಷಣದಲ್ಲಿ, ರಾಜಸ್ವದ ಹಿತದೃಷ್ಟಿಯಿಂದ ಮತ್ತು ಅಧಿನಿಯಮದ ಉಪಬಂಧಗಳನ್ನು ಇನ್ನೂ ಹೆಚ್ಚು ಉತ್ತಮವಾಗಿ ಜಾರಿಗೊಳಿಸುವುದಕ್ಕಾಗಿ, ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನೋಂದಣಿಯ ವಾರ್ಷಿಕ ನವೀಕರಣ ಮಾಡುವುದಕ್ಕೆ, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ ಮೇರೆಗೆ ಉಪಬಂಧ ಕಲ್ಪಿಸಲಾಗುವುದು ಎಂದು ತಿಳಿಸಿರುತ್ತಾರೆ. ಅಲ್ಲದೆ, ನವೀಕರಣದ ಉಪಬಂಧವು, ಅಂಥ ಕಾರ್ಯಸಂಸ್ಥೆಗಳ ಇಂದಿನವರೆಗಿನ ಅಂಕಿ-ಅಂಶಗಳ ನಿರ್ವಹಣೆಗೂ ಸಹ ಅನುಕೂಲ ಕಲ್ಪಿಸಿಕೊಡುತ್ತದೆ ಹಾಗೂ ನಿಯೋಜಿತರಿಗೆ ಉತ್ತಮ ಸೇವಾ ಷರತ್ತುಗಳನ್ನು ಕಲ್ಪಿಸುವುದಕ್ಕೆ ಅನುವಾಗುತ್ತದೆ ಎಂದು ಸಹ ತಿಳಿಸಿರುತ್ತಾರೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಎ, ದಿನಾಂಕ 26ನೇ ಜುಲೈ 1982 ಸಂಖ್ಯೆ 588 ಎಂದು ಪುಟ 4ರಲ್ಲಿ ಪ್ರಕಟಿಸಲಾಗಿದೆ.)

**V**

**1986ರ ತಿದ್ದುಪಡಿ ಅಧಿನಿಯಮ 17.-** ಭಾರತ ಆಹಾರ ನಿಗಮವು, ರಾಜ್ಯದಲ್ಲಿ ಆಹಾರ ಧಾನ್ಯಗಳ ವಿತರಣಾ ಕಾರ್ಯಕ್ರಮದಲ್ಲಿ ಒಂದು ಪ್ರಮುಖ ಸಂಸ್ಥೆಯಾಗಿದೆ.

ಸದರಿ ನಿಗಮದ ಕಾರ್ಯಸಂಸ್ಥೆಗಳನ್ನು, ಭಾರತದಲ್ಲಿನ ಹಲವು ರಾಜ್ಯಗಳಲ್ಲಿ/ ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿ, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ಕ್ಕೆ ಸದೃಶವಾದ ಅಧಿನಿಯಮಿತಿಗಳ ಉಪಬಂಧಗಳಿಂದ ವಿನಾಯಿತಿಗೊಳಿಸಲಾಗಿದೆ.

ಆದ್ದರಿಂದ, ಅಂಚೆ, ಟೆಲಿಗ್ರಾಫಿಕ್ ಅಥವಾ ಟೆಲಿಫೋನ್ ಸೇವೆ ಮೊದಲಾದ ಸೇವೆಗಳಲ್ಲಿ ಮತ್ತು ಸಾರ್ವಜನಿಕರಿಗೆ ವಿದ್ಯುತ್, ಬೆಳಕು ಅಥವಾ ನೀರು ಮೊದಲಾದವುಗಳನ್ನು ಸರಬರಾಜು ಮಾಡುವಂಥ ಸಂಸ್ಥೆಗಳ ಸೇವೆಗಳಿಗೆ ವಿನಾಯಿತಿ ನೀಡಿದ್ದು, ಅದರಂತೆ ಈ ಸಂಸ್ಥೆಯನ್ನು, ಸಹ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ ಉಪಬಂಧಗಳಿಂದ ವಿನಾಯಿತಿಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಎ, ದಿನಾಂಕ 21ನೇ ಫೆಬ್ರುವರಿ 1986 ಸಂಖ್ಯೆ 134 ಎಂದು ಪುಟ. 3ರಲ್ಲಿ ಪ್ರಕಟಿಸಲಾಗಿದೆ.)

**VI**

**1997ರ ತಿದ್ದುಪಡಿ ಅಧಿನಿಯಮ 25.-** ಈ ಕೆಳಕಂಡವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ಕ್ಕೆ ತಿದ್ದುಪಡಿ ಮಾಡಬೇಕೆಂದು ಉದ್ದೇಶಿಸಲಾಗಿದೆ, ಎಂದರೆ:-

(1) 'ಮಗು' ಎಂಬ ಪರಿಭಾಷೆಯಲ್ಲಿ, ಮಗುವಿನ ವಯೋಮಿತಿಯನ್ನು "12 ರಿಂದ 14" ವರ್ಷಗಳಿಗೆ ಹೆಚ್ಚಿಸುವುದು;

(2) 'ಪ್ರತಿವರ್ಷ'ಕ್ಕೆ ಬದಲಾಗಿ 'ಐದು' ವರ್ಷಗಳಿಗೊಮ್ಮೆ ನೋಂದಣಿ ಪ್ರಮಾಣಪತ್ರವನ್ನು ನವೀಕರಣಗೊಳಿಸುವುದು;

(3) 6ಎ ಹೊಸ ಪ್ರಕರಣವನ್ನು ಸೇರಿಸುವುದರ ಮೂಲಕ, ಆತನ ಕಾರ್ಯಸಂಸ್ಥೆಯಲ್ಲಿ ನೇಮಕದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ನೇಮಕಗೊಂಡ ವ್ಯಕ್ತಿಯ ಹೆಸರು, ಪದನಾಮ ಮತ್ತು ನೇಮಕದ ನಿಬಂಧನೆಗಳು ಮತ್ತು ಷರತ್ತುಗಳು, ಮುಂತಾದವುಗಳನ್ನು ಲಿಖಿತದಲ್ಲಿ ಸೂಚಿಸಿ ನಿಯೋಜಿತರಿಗೆ, ನಿಯೋಜಕರು ನೇಮಕ ಆದೇಶಗಳನ್ನು ಕಡ್ಡಾಯವಾಗಿ ನೀಡುವುದು;

(4) ಯುವ ವ್ಯಕ್ತಿಗಳ ಕೆಲಸದ ವೇಳೆಗಳಿಗೆ ಸಂಬಂಧಿಸಿದಂತೆ, "12 ರಿಂದ 14 ವರ್ಷಗಳು" ಎಂಬುದಕ್ಕೆ ಬದಲಾಗಿ "15 ರಿಂದ 18 ವರ್ಷಗಳವರೆಗೆ" ವಯೋಮಿತಿಯನ್ನು ಹೆಚ್ಚಿಸುವುದು;

(5) ಹೊಸ ಕಾರ್ಯಸಂಸ್ಥೆಗಳನ್ನು ಪ್ರಾರಂಭಿಸಿದ ದಿನಾಂಕದಿಂದ 30 ದಿನಗಳೊಳಗೆ ವಾರದ ರಜಾದಿನಗಳನ್ನು ನಿಗದಿಪಡಿಸುವುದು;

(6) ಮಜೂರಿ ಸಹಿತ ರಜೆಗೆ, ಸಂಬಂಧಿಸಿದಂತೆ ಹಕ್ಕನ್ನು ಪಡೆದುಕೊಳ್ಳುವುದಕ್ಕಾಗಿ ಕನಿಷ್ಠ 240 ದಿವಸಗಳ ಅಥವಾ ಹೆಚ್ಚಿನ ಕೆಲಸದ ಅವಧಿಯನ್ನು ತೆಗೆದುಹಾಕುವುದು ಮತ್ತು ಇದಕ್ಕೆ ಸಂಬಂಧಿಸಿದಂತೆ ಇತರೆ ಕೆಲವು ತತ್ಪರಿಣಾಮವಾದ ತಿದ್ದುಪಡಿಗಳನ್ನು ತರುವುದು;

(7) ಯುವ ವ್ಯಕ್ತಿಗಳ ನಿಯೋಜನೆಯನ್ನು ನಿಷೇಧಿಸುವ ಉದ್ದೇಶಕ್ಕಾಗಿ "12 ರಿಂದ 14" ವರ್ಷಗಳ ವಯೋಮಿತಿಯನ್ನು "15 ರಿಂದ 18" ವರ್ಷಗಳವರೆಗೆ ಹೆಚ್ಚಿಸುವುದು;

(8) ಮಕ್ಕಳ ನಿಯೋಜನೆಗಾಗಿ ಪ್ರತ್ಯೇಕ ಹೆಚ್ಚಿನ ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವುದು;

(9) ದುರ್ನಡತೆಯ ರುಜುವಾತಿನ ಯುಕ್ತ ಕಾರಣಗಳಿಲ್ಲದೆ ತೆಗೆದುಹಾಕಿದ ಅಥವಾ ವಜಾ ಮಾಡಿದ ನಿಯೋಜಕನು, ನಿಯೋಜಿತನಿಗೆ ಸಂದಾಯ ಮಾಡತಕ್ಕ ನಷ್ಟಪರಿಹಾರವಾಗಿ ಆರು ತಿಂಗಳುಗಳ ವೇತನದ ಗರಿಷ್ಠ ಮಿತಿಯನ್ನು ತೆಗೆದುಹಾಕುವುದು;

(10) ಕೆಲವು ಅಪರಾಧಗಳಿಗಾಗಿ ದಂಡನೆಗಳನ್ನು ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV 2ಎ ರಲ್ಲಿ 1997ನೇ ಫೆಬ್ರುವರಿ 21ನೇ ದಿನಾಂಕದಂದು, ಸಂಖ್ಯೆ 245 ಎಂದು ಪುಟ. 13ರಲ್ಲಿ ಪ್ರಕಟಿಸಲಾಗಿದೆ.)

**VII**

**2001ರ ತಿದ್ದುಪಡಿ ಅಧಿನಿಯಮ 11.-** ಮಾಹಿತಿ ತಂತ್ರಜ್ಞಾನ ಕಾರ್ಯಸಂಸ್ಥೆಗಳ ಮತ್ತು ಮಾಹಿತಿ ತಂತ್ರಜ್ಞಾನದ ಸೇವೆಗಳನ್ನು ಒದಗಿಸುವ ಕಾರ್ಯಸಂಸ್ಥೆಗಳ, ಜೈವಿಕ ತಂತ್ರಜ್ಞಾನ ಮತ್ತು ಸಾಂಕ್ರಾಮಿಕ ಹಾಗೂ ಇತರೆ ರೋಗಗಳ ಕಾರ್ಯಸಂಸ್ಥೆಗಳ ಸಂಶೋಧನಾ ಕೇಂದ್ರಗಳಲ್ಲಿನ ಕಾರ್ಯಸ್ವರೂಪವು, ಅಂಥ ಕಾರ್ಯಸಂಸ್ಥೆಗಳಲ್ಲಿನ ಶೋಧನೆ, ಕಲ್ಪನೆ ಹಾಗೂ ಪರ್ಯಾಲೋಚನೆ ಮತ್ತು ರೂಪುರೇಷೆಯನ್ನು ರಚಿಸುವಂಥ ಹೆಚ್ಚಿನ ಬೌದ್ಧಿಕ ಶ್ರಮದ ಕಾರ್ಯಗಳನ್ನು, ಅವರ ಕೆಲಸಕಾರ್ಯಗಳು ಒಳಗೊಳ್ಳುವುದರಿಂದ, ಕೆಲಸದ ವೇಳೆಗಳ ನಿಬಂಧನೆಗಳಲ್ಲಿ ಇರುವ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಹಾಕಿ, ಅದರಲ್ಲಿ ನಮ್ಯತೆಯನ್ನು ತರುವ ಅಗತ್ಯವಿರುತ್ತದೆ. ಹಾಗಾಗಿ,

ಮಾಡಬೇಕೆಂದು ವಹಿಸಿದ ಕಾರ್ಯವನ್ನು ಹೊರತುಪಡಿಸಿ, ಅವರ ಕೆಲಸದ ವೇಳೆಗಳು ಹಾಗೂ ವಾರದ ರಜಾದಿನಗಳಿಗೆ ಸಂಬಂಧಿಸಿದಂತೆ ಕೂಡ ಹೆಚ್ಚಿನ ಸಮಯವನ್ನು ನಿಗದಿಪಡಿಸಿರುವುದಿಲ್ಲ.

ಆದ್ದರಿಂದ, ಕೆಲಸವನ್ನು ಆರಂಭಿಸುವುದಕ್ಕೆ ಮತ್ತು ನಿಲ್ಲಿಸುವುದಕ್ಕೆ ಮತ್ತು ಐಚ್ಛಿಕ ಕೆಲಸದ ವೇಳೆಯನ್ನು ನೀಡುವಷ್ಟರಮಟ್ಟಿಗಿನ ವಾರದ ರಜಾದಿನಗಳಿಗೆ ಸಂಬಂಧಿಸಿದಂತೆ ಭಾಗಶಃ ವಿನಾಯಿತಿ ನೀಡುವುದಕ್ಕಾಗಿ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001 ರ ವಿಧಾನಸಭೆಯ ವಿಧೇಯಕ ಸಂಖ್ಯೆ. 2 ಕಡತ ಸಂಖ್ಯೆ. ಸಂವ್ಯಶಾಇ 20 ಶಾಸನ 2000 ಅನ್ನು ನೋಡಿ).

## VIII

**2002ರ ತಿದ್ದುಪಡಿ ಅಧಿನಿಯಮ 14.-** ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ 25ನೇ ಪ್ರಕರಣವು, ರಾತ್ರಿ ವೇಳೆಯಲ್ಲಿ, ಮಹಿಳೆಯರ ಮತ್ತು ಯುವ ವ್ಯಕ್ತಿಗಳ ನಿಯೋಜನೆಯನ್ನು ನಿಷೇಧಿಸುತ್ತದೆ. ಮಾಹಿತಿ ತಂತ್ರಜ್ಞಾನದ ಅಥವಾ ಮಾಹಿತಿ ತಂತ್ರಜ್ಞಾನ ಸೇವೆಯನ್ನು ಒದಗಿಸುವ ಕಾರ್ಯಸಂಸ್ಥೆಗಳು, ವಿದೇಶಿ ಗ್ರಾಹಕರಿಗಾಗಿ ತಂತ್ರಾಂಶ (ಸಾಫ್ಟ್ ವೇರ್)ವನ್ನು ಅಭಿವೃದ್ಧಿಪಡಿಸಿವೆ. ಈ ಕಾರ್ಯಸಂಸ್ಥೆಗಳಲ್ಲಿನ ಸಿಬ್ಬಂದಿ ವರ್ಗವು ಸಾಮಾನ್ಯವಾಗಿ ತಡರಾತ್ರಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಸಿಬ್ಬಂದಿ ವರ್ಗವು, ಆಯಾ ದೇಶದ ಜಾಗತಿಕ ಸಮಯವನ್ನು ಅವಲಂಬಿಸಿ ಸಂಜೆ ವೇಳೆ ಅಥವಾ ರಾತ್ರಿಯಿಡೀ, ಅವರವರ ಗ್ರಾಹಕರೊಂದಿಗೆ ಪರಸ್ಪರ ಸಂವಹನ ನಡೆಸಬೇಕಾಗುತ್ತದೆ. ಈ ಕಾರ್ಯಸಂಸ್ಥೆಗಳು, ಬಹುಪಾಲು ಮಹಿಳಾ ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸಿಕೊಂಡಿವೆ. 25ನೇ ಪ್ರಕರಣವು ರಾತ್ರಿ ವೇಳೆಯಲ್ಲಿ ಮಹಿಳೆಯರ ನಿಯೋಜನೆಯನ್ನು ನಿಷೇಧಿಸಿರುವುದರಿಂದ, ಇದು ಕಾರ್ಯಸಂಸ್ಥೆಗಳ ಕಾರ್ಯನಿರ್ವಹಣೆಗೆ ಬಾಧಕವನ್ನುಂಟುಮಾಡಿದೆ. ತಂತ್ರಾಂಶ ಅಭಿವೃದ್ಧಿಗೊಳಿಸುವ ಕಾರ್ಯವನ್ನು ಮಹಿಳಾ ನಿಯೋಜಕರನ್ನೂ ಸಹ ಒಳಗೊಂಡಿರಬಹುದಾದಂಥ ಒಂದು ತಂಡಕ್ಕೆ ಸಾಮಾನ್ಯವಾಗಿ ವಹಿಸಿಕೊಡಲಾಗಿರುತ್ತದೆ.

ಆದ್ದರಿಂದ, ರಾತ್ರಿ ವೇಳೆಯಲ್ಲಿ ಮಹಿಳಾ ನಿಯೋಜಿತರ ಸೇವೆಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ, ಕಾರ್ಯಸಂಸ್ಥೆಗಳು ಅಂಥ ಮಹಿಳಾ ನಿಯೋಜಕರಿಗೆ ಸಾರಿಗೆ ಸೌಲಭ್ಯಗಳು ಮತ್ತು ಭದ್ರತೆಯನ್ನು ಒದಗಿಸಬೇಕು ಎಂಬ ಷರತ್ತಿಗೊಳಪಟ್ಟು, ರಾತ್ರಿ ವೇಳೆಯಲ್ಲಿ ಮಹಿಳೆಯರ ನಿಯೋಜನೆಗೆ ಸಂಬಂಧಿಸಿದಂತೆ, ಆ ಪ್ರಕರಣದ ಉಪಬಂಧಗಳಿಂದ, ಮಾಹಿತಿ ತಂತ್ರಜ್ಞಾನದ ಅಥವಾ ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಒದಗಿಸುವ ಯಾವುದೇ ಕಾರ್ಯಸಂಸ್ಥೆಗಳು ವಿನಾಯಿತಿ ಪಡೆಯುವಂತೆ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಕ್ಕೆ 25ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆ ವಿಧೇಯಕ ಸಂಖ್ಯೆ. 16 ಕಡತ ಸಂಖ್ಯೆ. ಸಂವ್ಯಶಾಇ 28 ಶಾಸನ 2001 ದಿನಾಂಕ: 30.08.2002 ಅನ್ನು ನೋಡಿ)

## IX

**2005ರ ತಿದ್ದುಪಡಿ ಅಧಿನಿಯಮ 28.-** ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಮಾಲೀಕರಿಗೆ, ತಮ್ಮ ಕಾರ್ಯಸಂಸ್ಥೆಗಳನ್ನು ನೋಂದಾಯಿಸುವಲ್ಲಿ ಮತ್ತು ತಮ್ಮ ನೋಂದಣಿ ಪ್ರಮಾಣಪತ್ರಗಳನ್ನು ನವೀಕರಿಸುವಲ್ಲಿ ಉಂಟಾಗುವ ಅನಗತ್ಯ ತೊಂದರೆಗಳನ್ನು ತಪ್ಪಿಸಲು, ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಮತ್ತು ಆ ಪ್ರದೇಶದ ಕಾರ್ಮಿಕ ಪರಿಶೀಲಕನು ಅಂಥ ಅರ್ಜಿಗಳನ್ನು ಸ್ವೀಕರಿಸಿದ ದಿನಾಂಕದಿಂದ ನೋಂದಣಿ ಅಥವಾ ನವೀಕರಣ ಮಾಡದಿದ್ದಲ್ಲಿ ಅಥವಾ ಮೂವತ್ತು

ದಿನಗಳೊಳಗಾಗಿ ಅಂಥ ನೋಂದಣಿ/ನವೀಕರಣವನ್ನು ಮಾಡದಿರುವುದಕ್ಕೆ ಕಾರಣಗಳನ್ನು ತಿಳಿಸಲು ವಿಫಲನಾದ ಸಂದರ್ಭದಲ್ಲಿ, ಭಾವಿತ ನೋಂದಣಿಗಾಗಿ ಅಥವಾ ನೋಂದಣಿ ಪ್ರಮಾಣಪತ್ರದ ನವೀಕರಣಕ್ಕಾಗಿ ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ.

ಅಲ್ಲದೆ, ಭಾವಿತ ನೋಂದಣಿಯ ಪ್ರಯೋಜನದ ಸುಳ್ಳು ಕ್ಲೇಮು ಮಾಡುವುದಕ್ಕೆ ಆರು ತಿಂಗಳುಗಳಿಗಿಂತ ಕಡಿಮೆಯಿರದ ಕಾರಾವಾಸದೊಂದಿಗೆ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡವನ್ನು ವಿಧಿಸುವುದಕ್ಕಾಗಿಯೂ ಸಹ ಉಪಬಂಧವನ್ನು ಕಲ್ಪಿಸಿದೆ.

ಆದ್ದರಿಂದ ಈ ವಿಧೇಯಕ.

(2005 ರ ವಿಧಾನಸಭೆಯ ವಿಧೇಯಕ ಸಂಖ್ಯೆ. 15)

## X

**2007 ರ ತಿದ್ದುಪಡಿ ಅಧಿನಿಯಮ 12.-**ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ ಉಪಬಂಧಗಳು, ಜುಲ್ಮಾನೆ ಅಥವಾ ಕಾರಾವಾಸದ ರೂಪದಲ್ಲಿ ದಂಡ ವಿಧಿಸುವುದಕ್ಕೆ ಸಂಬಂಧಿಸಿದಂತೆ ಮಾತ್ರ ಉಪಬಂಧ ಕಲ್ಪಿಸಿದ್ದು, ಇಲಾಖಾವಾರು ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ಉಪಬಂಧ ಕಲ್ಪಿಸಿರುವುದಿಲ್ಲ. ಹಾಗಾಗಿ, ವ್ಯಾಜ್ಯಗಳ ಪ್ರಮಾಣವನ್ನು ಕಡಿಮೆ ಮಾಡುವುದಕ್ಕೆ ಮತ್ತು ಬಾಕಿ ಹಣವನ್ನು ತ್ವರಿತವಾಗಿ ವಸೂಲ್ಮಾಡುವುದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ರ ಮೇರೆಗೆ ಅಪರಾಧಗಳ ರಾಜಿಗಾಗಿ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2007 ರ ವಿಧಾನಸಭೆಯ ವಿಧೇಯಕ ಸಂಖ್ಯೆ. 15]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 24ನೇ ನಮೂದು.]

## XI

**2020ರ ತಿದ್ದುಪಡಿ ಅಧಿನಿಯಮ 40.-** ರಾತ್ರಿ ಪಾಳಿಯಲ್ಲಿ ಮಹಿಳಾ ನಿಯೋಜಿತರು, ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅನುಮತಿ ನೀಡುವುದಕ್ಕೆ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ 08) ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

[2020ರ ವಿಧಾನಸಭೆ ವಿಧೇಯಕ ಸಂ. 08, ಕಡತ ಸಂಖ್ಯೆ. ಸಂವ್ಯಶಾಇ 05 ಶಾಸನ 2020]

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 24ನೇ ನಮೂದು)

[ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ, ಭಾಗ IVಎ, ಸಂ. 471, ದಿನಾಂಕ: 19.10.2020 ರಲ್ಲಿ ಪ್ರಕಟಿಸಲಾಗಿದೆ]

**XII**

**2021ರ ತಿದ್ದುಪಡಿ ಅಧಿನಿಯಮ 08.-** ನಿಯೋಜಿತನು ಮುಂದೆ ಬರುವ ವರ್ಷಕ್ಕೆ ಮೂವತ್ತು ದಿನಗಳ ಬದಲಾಗಿ ನಲವತ್ತೈದು ದಿವಸಗಳ ರಜೆಯನ್ನು ಉಳಿಸಿಕೊಂಡು ಹೋಗುವುದನ್ನು ಸಾಧ್ಯವಾಗಿಸಲು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 8) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆ ವಿಧೇಯಕ ಸಂ. 68, ಕಡತ ಸಂಖ್ಯೆ. ಸಂವ್ಯಶಾಇ 80 ಶಾಸನ 2020]

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 24ನೇ ನಮೂದು)

[ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ, ಭಾಗ IVಎ, ಸಂ. 194, ದಿನಾಂಕ: 19.02.2021 ರಲ್ಲಿ ಪ್ರಕಟಿಸಲಾಗಿದೆ]

## 1962ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 8

(1962ನೇ ಮಾರ್ಚ್ ಮೊದಲನೆ ದಿನದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟವಾಯಿತು)

## [1][ಕರ್ನಾಟಕ][1] ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961

(1962ನೇ ಫೆಬ್ರವರಿ ಹದಿನೈದನೆಯ ದಿವಸದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಿತು.)

(1966ರ 36, 1969ರ 4, 1982ರ 33, 1986ರ 17, 1997ರ 25, 2001ರ 11, 2002ರ 14, 2005ರ 28, 2007ರ 12, 2020ರ 40 ಮತ್ತು 2021ರ 08ನೇ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

ಅಂಗಡಿಗಳಲ್ಲಿ, ವಾಣಿಜ್ಯ ಕಾರ್ಯಸಂಸ್ಥೆಗಳಲ್ಲಿ ಕೆಲಸ ಮತ್ತು ನಿಯೋಜನೆಯ ಷರತ್ತುಗಳನ್ನು ವಿನಿಯಮಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಅಂಗಡಿಗಳಲ್ಲಿ, ವಾಣಿಜ್ಯ ಕಾರ್ಯಸಂಸ್ಥೆಗಳಲ್ಲಿ ಕೆಲಸ ಮತ್ತು ನಿಯೋಜನೆಯ ಷರತ್ತುಗಳನ್ನು ಮತ್ತು ಇತರ ಪ್ರಾಸಂಗಿಕ ವಿಷಯಗಳನ್ನು ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

### ಅಧ್ಯಾಯ I
### ಪ್ರಾರಂಭಿಕ

**1) ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗುತ್ತದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆ ಮೂಲಕ 1.10.1964 ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

(4) (ಎ) ಅದು, ಮೊದಲನೆಯದಾಗಿ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳಿಗೆ ಮತ್ತು 42ನೇ ಪ್ರಕರಣದ ಮೂಲಕ ನಿರಸನಗೊಂಡ ಯಾವುದೇ ಅಧಿನಿಯಮವು ಅನ್ವಯವಾಗಿದ್ದಂಥ ಇತರ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು.

(ಬಿ) ಅದು, ಯಾವುದೇ ಇತರ ಪ್ರದೇಶಕ್ಕೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗಿ ಅನ್ವಯವಾಗತಕ್ಕದ್ದು; ಆ ದಿನಾಂಕವು ಸರ್ಕಾರಿ ರಾಜ್ಯಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮುಂಚಿನದಾಗಿರತಕ್ಕದ್ದಲ್ಲ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ವಯಸ್ಕ" ಎಂದರೆ, ಹದಿನೆಂಟನೆಯ ವರ್ಷವನ್ನು ಪೂರ್ಣಗೊಳಿಸಿರುವ ವ್ಯಕ್ತಿ;

(ಬಿ) "ಅಪ್ರೆಂಟಿಸ್" ಎಂದರೆ, ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಕಸಬು ಅಥವಾ ತರಬೇತಿ ಪಡೆಯುವ ಉದ್ದೇಶಕ್ಕಾಗಿ ಮಜೂರಿಗಳ ಸಂದಾಯದ ಮೇಲಾಗಲೀ ಅಥವಾ ಅದಿಲ್ಲದೆ ನಿಯೋಜಿತನಾಗಿರುವ [1][ಹದಿನಾಲ್ಕು ವರ್ಷಗಳಿಗಿಂತ][1] ಕಡಿಮೆ ವಯಸ್ಸಿನವನಲ್ಲದ ವ್ಯಕ್ತಿ;

1. 1977 ರ ಅಧಿನಿಯಮ 25 ರ ಮೂಲಕ 12.2.1998 ರಿಂದ ಜಾರಿಗೆ ಬರುವಂತೆ ಅಧಿಸೂಚನ ಮೂಲಕ ಪ್ರತಿನಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

[1][ಬಿಎ) 'ಬ್ಯಾಂಕಿಂಗ್ ಕಂಪನಿ' ಎಂದರೆ,-

1. 1982ರ ಅಧಿನಿಯಮ 33 ರ ಮೂಲಕ 4.12.1982 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಮೂಲಕ (i) ರಿಂದ (vi) ರ ವರೆಗಿನ ಉಪಖಂಡವನ್ನು ಸೇರಿಸಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

(i) ಭಾರತೀಯ ರಿಸರ್ವ್ ಬ್ಯಾಂಕ್;

(ii) ಬ್ಯಾಂಕಿಂಗ್ ವಿನಿಯಮಗಳ ಅಧಿನಿಯಮ, 1949 ರ ಮೇರೆಗೆ ಪರಿಭಾಷಿಸಿದ ಬ್ಯಾಂಕಿಂಗ್ ಕಂಪನಿ;

(iii) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 ರ ಮೇರೆಗೆ ಸ್ಥಾಪಿಸಿದ ಭಾರತೀಯ ಸ್ಟೇಟ್ ಬ್ಯಾಂಕ್;

(iv) ಭಾರತೀಯ ಸ್ಟೇಟ್ ಬ್ಯಾಂಕ್ (ಅಧೀನ ಬ್ಯಾಂಕ್‌ಗಳು) ಅಧಿನಿಯಮ, 1959ರಲ್ಲಿ ಪರಿಭಾಷಿಸಿದ ಅಧೀನ ಬ್ಯಾಂಕ್;

(v) ಬ್ಯಾಂಕಿಂಗ್ ಕಂಪನಿಗಳ (ಉದ್ದಿಮೆಗಳ ಸ್ವಾಧೀನ ಮತ್ತು ವರ್ಗಾವಣೆ) ಅಧಿನಿಯಮ, 1970 ರ ಮೇರೆಗೆ ಸ್ಥಾಪಿಸಿದ ಸಂವಾದಿ ಹೊಸ ಬ್ಯಾಂಕ್;

(vi) ಬ್ಯಾಂಕಿಂಗ್ ಕಂಪನಿಗಳ (ಉದ್ದಿಮೆಗಳ ಸ್ವಾಧೀನ ಮತ್ತು ವರ್ಗಾವಣೆ) ಅಧಿನಿಯಮ, 1980 ರ ಮೇರೆಗೆ ಸ್ಥಾಪಿಸಿದ ಸಂವಾದಿ ಹೊಸ ಬ್ಯಾಂಕ್.][1]

(ಸಿ) "ಮಗು" ಎಂದರೆ, [1][ಹದಿನಾಲ್ಕನೇ ವರ್ಷ][1]ವನ್ನು ಪೂರ್ಣಗೊಳಿಸದೇ ಇರುವ ವ್ಯಕ್ತಿ;

1. 1997ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) "ಮುಚ್ಚಿರುವುದು" ಎಂದರೆ, ಯಾರೇ ಗ್ರಾಹಕನ ಸೇವೆಗಾಗಿ ಅಥವಾ ಕಾರ್ಯಸಂಸ್ಥೆಗೆ ಸಂಬಂಧಿಸಿದ ಯಾವುದೇ ವ್ಯವಹಾರಕ್ಕಾಗಿ ತೆರೆದಿಲ್ಲದೇ ಇರುವುದು;

(ಇ) "ವಾಣಿಜ್ಯ ಕಾರ್ಯಸಂಸ್ಥೆ" ಎಂದರೆ, ಯಾವ ವಾಣಿಜ್ಯ ಅಥವಾ ವ್ಯಾಪಾರ ಅಥವಾ ಬ್ಯಾಂಕಿಂಗ್ ಅಥವಾ ವಿಮಾ ಕಾರ್ಯಸಂಸ್ಥೆಯಲ್ಲಿ ಅಥವಾ ಆಡಳಿತಾತ್ಮಕ ಸೇವೆಯಲ್ಲಿ ನಿಯೋಜಿಸಲಾಗಿರುವ ವ್ಯಕ್ತಿಗಳನ್ನು ಮುಖ್ಯವಾಗಿ ಕಚೇರಿ ಕೆಲಸದಲ್ಲಿ ತೊಡಗಿಸಲಾಗಿದೆಯೋ ಆ ಕಾರ್ಯಸಂಸ್ಥೆ, ಹೋಟೆಲ್, ಉಪಹಾರಗೃಹ, ಭೋಜನ ಅಥವಾ ಊಟದ ಗೃಹ, ಕೆಫೆ ಅಥವಾ ಯಾವುದೇ ಇತರ ಉಪಹಾರಗೃಹ, ಥಿಯೇಟರ್ ಅಥವಾ ಯಾವುದೇ ಇತರ ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳ ಮತ್ತು ಅದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ವಾಣಿಜ್ಯ ಕಾರ್ಯಸಂಸ್ಥೆಯೆಂಬುದಾಗಿ ಘೋಷಿಸುವಂಥ ಕಾರ್ಯಸಂಸ್ಥೆಗಳನ್ನು ಒಳಗೊಳ್ಳುತ್ತದೆ;

(ಎಫ್) "ದಿವಸ" ಎಂದರೆ, ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ;

ಪರಂತು, ಯಾವ ಉದ್ಯೋಗಿಯ ಕೆಲಸದ ಅವಧಿಗಳು ಮಧ್ಯರಾತ್ರಿಗೂ ಮೀರಿ ವಿಸ್ತರಿಸಿದ ಸಂದರ್ಭದಲ್ಲಿ, "ದಿವಸ" ಎಂದರೆ ಮಧ್ಯರಾತ್ರಿಯನ್ನು ಪರಿಗಣಿಸದೆ ಅಂಥ ಕೆಲಸವು ಪ್ರಾರಂಭವಾದ ಸಮಯದಿಂದ ಇಪ್ಪತ್ನಾಲ್ಕು ಗಂಟೆಗಳ ಅವಧಿ;

(ಜಿ) "ನಿಯೋಜಿತ" ಎಂದರೆ, ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಖಾಯಂ ಆಗಿಯಾಗಲೀ, ನಿಯತಕಾಲಿಕವಾಗಿಯೇ ಆಗಲಿ, ಕರಾರಿನ ಮೇಲಾಗಲೀ ಅಥವಾ ತುಂಡು ದರದ ಮಜೂರಿಗಳ ಮೇಲೆ ಆಗಲೀ ಅಥವಾ ರುಸುಂಮಿನ ಆಧಾರದ ಮೇಲೆ ಆಗಲೀ, ಅವನು ತನ್ನ ದುಡಿಮೆಗಾಗಿ ಯಾವುದೇ ಪ್ರತಿಫಲವನ್ನು ಪಡೆಯದೇ ಇದ್ದಾಗ್ಯೂ ಸಂಪೂರ್ಣವಾಗಿ ಅಥವಾ ಮುಖ್ಯವಾಗಿ, ನಿಯೋಜಿತನಾದ ವ್ಯಕ್ತಿ ಮತ್ತು ಕಾರ್ಖಾನೆಗಳ ಅಧಿನಿಯಮ, 1948ರ ವ್ಯಾಪ್ತಿಯ ಹೊರಗೆ ಬರುವ ಕಾರ್ಖಾನೆ ಅಥವಾ ಕೈಗಾರಿಕಾ ಕಾರ್ಯಸಂಸ್ಥೆಯ ಅಪ್ರೆಂಟಿಸ್, ಯಾರೇ ಲಿಪಿಕ ಅಥವಾ ಇತರ ಸದಸ್ಯನನ್ನು ಒಳಗೊಳ್ಳುತ್ತದೆ, ಆದರೆ 'ನಿಯೋಜಕನ' ಕುಟುಂಬದ ಸದಸ್ಯನನ್ನು ಒಳಗೊಳ್ಳುವುದಿಲ್ಲ; ಮತ್ತು 'ನಿಯೋಜಿತನಾಗಿರುವುದು' ಎನ್ನುವುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಎಚ್) "ನಿಯೋಜಕ" ಎಂದರೆ, ಕಾರ್ಯಸಂಸ್ಥೆಯ ಪ್ರಭಾರವನ್ನು ಹೊಂದಿರುವ ಅಥವಾ ಒಡೆತನವನ್ನು ಹೊಂದಿರುವ ಅಥವಾ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣವನ್ನು

ಹೊಂದಿರುವ ವ್ಯಕ್ತಿ ಮತ್ತು ಇದು ಕಾರ್ಯಸಂಸ್ಥೆಯ ಸಾಮಾನ್ಯ ನಿರ್ವಹಣೆ ಅಥವಾ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯೋಜಕನ ಕುಟುಂಬದ ಸದಸ್ಯರನ್ನು, ವ್ಯವಸ್ಥಾಪಕನನ್ನು, ಏಜೆಂಟ್‌ನನ್ನು ಅಥವಾ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಐ) "ಕಾರ್ಯಸಂಸ್ಥೆ" ಎಂದರೆ, ಅಂಗಡಿ ಅಥವಾ ವಾಣಿಜ್ಯ ಕಾರ್ಯಸಂಸ್ಥೆ;

(ಜೆ) ನಿಯೋಜಕನಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ, ನಿಯೋಜಕನ ಜೊತೆಯಲ್ಲಿ ವಾಸಿಸುವ ಅಥವಾ ಅವನ ಮೇಲೆ ಅವಲಂಬಿತನಾಗಿರುವ, ಗಂಡ ಅಥವಾ ಹೆಂಡತಿ, ಮಗು, ಮಗಳು, ತಂದೆ-ತಾಯಿ, ಸಹೋದರ ಅಥವಾ ಸಹೋದರಿ;

(ಕೆ) "ಪರಿಶೀಲಕ" ಎಂದರೆ, 26ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪರಿಶೀಲಕ ಮತ್ತು ಇದು ಮುಖ್ಯ ಪರಿಶೀಲಕ ಮತ್ತು ಸಹಾಯಕ ಪರಿಶೀಲಕರನ್ನು ಒಳಗೊಳ್ಳುತ್ತದೆ;

(ಎಲ್) "ರಜೆ" ಎಂದರೆ, ಈ ಅಧಿನಿಯಮದ IVನೇ ಅಧ್ಯಾಯದಲ್ಲಿ ಹೇಳಿರುವ ರಜೆ;

(ಎಂ) "ರಾತ್ರಿ" ಎಂದರೆ, ರಾತ್ರಿ 8 ರಿಂದ ಬೆಳಿಗ್ಗೆ 6 ರ ನಡುವಣ ಮಧ್ಯಂತರವನ್ನು ಒಳಗೊಳ್ಳುವಂಥ ಕನಿಷ್ಠ ಪಕ್ಷ ಒಂದಾದ ಮೇಲೊಂದರಂತೆ ಬರುವ ಹನ್ನೆರಡು ಗಂಟೆಗಳ ಅವಧಿ;

(ಎನ್) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಒ) "ತೆರೆದಿರುವುದು" ಎಂದರೆ, ಆ ಕಾರ್ಯಸಂಸ್ಥೆಗೆ ಸಂಬಂಧಿಸಿದ ಯಾರೇ ಗ್ರಾಹಕನ ಸೇವೆಗಾಗಿ ಅಥವಾ ಯಾವುದೇ ವ್ಯವಹಾರಕ್ಕಾಗಿ ತೆರೆದಿರುವುದು;

(ಪಿ) "ಕೆಲಸದ ಅವಧಿ" ಎಂದರೆ, ನಿಯೋಜಕನ ನಿಯಂತ್ರಣದಲ್ಲಿ, ನೌಕರನು ಇರುವಂಥ ಕಾಲ;

(ಕ್ಯೂ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

[1][(ಆರ್) x x x][1]

(ಎಸ್) "ಕಾರ್ಯಸಂಸ್ಥೆಗಳ ರಿಜಿಸ್ಟರು" ಎಂದರೆ, ಈ ಅಧಿನಿಯಮದ ಮೇರೆಗೆ ಕಾರ್ಯಸಂಸ್ಥೆಗಳ ನೋಂದಣಿಗಾಗಿ ಇಟ್ಟುಕೊಂಡು ಬಂದಿರುವ ರಿಜಿಸ್ಟರು;

(ಟಿ) "ನೋಂದಣಿ ಪ್ರಮಾಣಪತ್ರ" ಎಂದರೆ, ಕಾರ್ಯಸಂಸ್ಥೆಯ ನೋಂದಣಿಯನ್ನು ತೋರಿಸುವ ಪ್ರಮಾಣಪತ್ರ;

(ಯು) "ಅಂಗಡಿ" ಎಂದರೆ, ಯಾವುದೇ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಅಥವಾ ಗ್ರಾಹಕರಿಗೆ ಸೇವೆಗಳನ್ನು ಸಲ್ಲಿಸುತ್ತಿರುವ ಯಾವುದೇ ಆವರಣ ಮತ್ತು ಅದು ಅಂಥ ವ್ಯಾಪಾರ ಅಥವಾ ಅದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಅದೇ ಆವರಣದಲ್ಲಿಯೇ ಆಗಲಿ ಅಥವಾ ಅನ್ಯಥಾ ಉಪಯೋಗಿಸಲಾದ ಕಚೇರಿಗಳು, ಉಗ್ರಾಣಗಳು, ಗೋದಾಮು ಅಥವಾ ಸರಕುಗಳ ಉಗ್ರಾಣಗಳನ್ನು ಒಳಗೊಳ್ಳುತ್ತದೆ. ಆದರೆ ಕಾರ್ಖಾನೆಗಳ ಅಧಿನಿಯಮ, 1948 ರ ವ್ಯಾಪ್ತಿಯಲ್ಲಿ ಬರುವ ಅಂಗಡಿಯಲ್ಲಿ ವ್ಯಕ್ತಿಗಳು ನಿಯೋಜಿತರಾಗಿರುವ, ಕಾರ್ಖಾನೆಗೆ ಲಗತ್ತಾದ ವಾಣಿಜ್ಯ ಕಾರ್ಯಸಂಸ್ಥೆ ಅಥವಾ ಅಂಗಡಿಯನ್ನು ಒಳಗೊಳ್ಳುವುದಿಲ್ಲ;

(ವಿ) "ಅವಧಿ" ಎಂದರೆ, ಯಾವುದೇ ದಿವಸದಂದು ನಿಯೋಜಿತನ ಕೆಲಸದ ಪ್ರಾರಂಭ ಮತ್ತು ಅದು ಕೊನೆಗೊಳ್ಳುವ ನಡುವಣ ಅವಧಿ;

(ಡಬ್ಲ್ಯೂ) "ಮಜೂರಿಗಳು" ಎಂಬುದು, ಮಜೂರಿಗಳ ಸಂದಾಯ ಅಧಿನಿಯಮ, 1936 (1936 ರ ಕೇಂದ್ರ ಅಧಿನಿಯಮ IV) ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಎಕ್ಸ್) "ವಾರ" ಎಂದರೆ, ಶನಿವಾರದ ಮಧ್ಯರಾತ್ರಿಯಿಂದ ಅಥವಾ ನಿಯಮಿಸಲಾದ ಪ್ರಾಧಿಕಾರವು ನಿರ್ದಿಷ್ಟ ಪ್ರದೇಶಕ್ಕಾಗಿ ಬರಹದಲ್ಲಿ ಅನುಮೋದಿಸಬಹುದಾದ ಅಂಥ ಇತರ ರಾತ್ರಿಯಿಂದ ಪ್ರಾರಂಭವಾಗುವ ಏಳು ದಿವಸಗಳ ಅವಧಿ;

(ವೈ) "ವರ್ಷ" ಎಂದರೆ, ಜನವರಿ ಮೊದಲನೇ ದಿವಸದಂದು ಪ್ರಾರಂಭವಾಗುವ ವರ್ಷ;

(ಝಡ್) "ಯುವ ವ್ಯಕ್ತಿ" ಎಂದರೆ, ಮಗುವಾಗಿರದ ಮತ್ತು ಅವನ ಹದಿನೆಂಟನೇ ವರ್ಷವನ್ನು ಪೂರ್ಣಗೊಳಿಸದೇ ಇರುವ ವ್ಯಕ್ತಿ.

1. 1966 ರ ಅಧಿನಿಯಮ 36 ರ ಮೂಲಕ 25.4.1969 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಮೂಲಕ ಬಿಟ್ಟುಬಿಡಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

**3. ವಿನಾಯಿತಿಗಳು.-** (1) ಈ ಅಧಿನಿಯಮದಲ್ಲಿ ಇರುವುದಾವುದೂ,-

(ಎ) ವಾಣಿಜ್ಯ ಉದ್ಯಮಗಳನ್ನು ಹೊರತುಪಡಿಸಿ, ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರಗಳ ಅಥವಾ ಅವುಗಳ ಅಧೀನದಲ್ಲಿರುವ ಕಚೇರಿಗಳಿಗೆ;

(ಬಿ) ಯಾವುದೇ ರೈಲ್ವೆ ಸೇವೆ, ಜಲಸಾರಿಗೆ ಸೇವೆ, ಅಂಚೆ, ತಂತಿ ಅಥವಾ ದೂರವಾಣಿ ಸೇವೆ, ಸಾರ್ವಜನಿಕ ನಿರ್ಮಲೀಕರಣದ ಅಥವಾ ನೈರ್ಮಲ್ಯದ ಯಾವುದೇ ವ್ಯವಸ್ಥೆ ಅಥವಾ ಸಾರ್ವಜನಿಕರಿಗೆ ವಿದ್ಯುತ್ ದೀಪ ಅಥವಾ ನೀರನ್ನು ಸರಬರಾಜು ಮಾಡುವಂಥ ಯಾವುದೇ ಕೈಗಾರಿಕೆ, ವ್ಯವಹಾರ ಅಥವಾ ಉದ್ಯಮಕ್ಕೆ;

(ಸಿ) ರೈಲ್ವೆಯಲ್ಲಿನ ಊಟದ ಬಂಡಿಗಳಿಗೆ (ರೈಲ್ವೆ ಡೈನಿಂಗ್ ಕಾರ್ ಗಳಿಗೆ);

(ಡಿ) ರೋಗಿ, ದುರ್ಬಲ ಅಥವಾ ಮಾನಸಿಕವಾಗಿ ಅಸಮರ್ಥರಾದವರ ಶುಶ್ರೂಷೆಗಾಗಿ ಅಥವಾ ಪಾಲನೆಗಾಗಿನ ಕಾರ್ಯಸಂಸ್ಥೆಗಳಿಗೆ;

[1][(ಡಿಡಿ) ಭಾರತ ಆಹಾರ ನಿಗಮದ ಕಾರ್ಯಸಂಸ್ಥೆಗಳಿಗೆ;][1]

1. 1986 ರ ಅಧಿನಿಯಮ 17 ರ ಮೂಲಕ 8.5.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಇ) ಮೂರಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳು ನಿಯೋಜಿತವಾಗಿರುವಂಥ ನ್ಯಾಯವಾದಿಗಳ ಮತ್ತು ವೈದ್ಯಕೀಯ ವೃತ್ತಿಗರ ಕಚೇರಿಗಳಿಗೆ;

(ಎಫ್) [1][ಬ್ಯಾಂಕಿಂಗ್ ಕಂಪನಿ][1]ಯ ಕಚೇರಿಗಳು;

1. 1982 ರ ಅಧಿನಿಯಮ 33 ರ ಮೂಲಕ 4.12.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜಿ) ಮೇಲೆ ಹೇಳಿದ (ಎ) ಯಿಂದ (ಎಫ್) ಖಂಡಗಳಲ್ಲಿ ನಮೂದಿಸಿದ ಯಾವುದೇ ಕಾರ್ಯಸಂಸ್ಥೆಯ ವ್ಯವಹಾರದಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿಗೆ;

(ಎಚ್) ಯಾವುದೇ ಕಾರ್ಯಸಂಸ್ಥೆಯಲ್ಲಿ ವ್ಯವಸ್ಥಾಪನಾ ಸ್ಥಾನಗಳಲ್ಲಿರುವ ವ್ಯಕ್ತಿಗಳಿಗೆ;

(ಐ) ಚಾಲಕರು, ಉಸ್ತುವಾರಿ ಮಾಡುವವರು, ಪಹರೆ ಮತ್ತು ರಕ್ಷಣಾ ಸಿಬ್ಬಂದಿ ಅಥವಾ ಪ್ರಚಾರಕರಾಗಿರುವಂಥ ಯಾವ ವ್ಯಕ್ತಿಗಳ ಕೆಲಸವು ಅಂತರ್ನಿಹಿತವಾಗಿ ಬಿಟ್ಟು ಬಿಟ್ಟು ಬರುವುದೋ ಅಂಥ ವ್ಯಕ್ತಿಗಳಿಗೆ; ಮತ್ತು

(ಜೆ) ಸರಕುಗಳ ರವಾನೆಗಾಗಿ ಜವಾಬ್ದಾರರಾಗಿರುವ ಸರಕು ಖಾಲಿ ಮಾಡುವ ಮತ್ತು ರವಾನೆ ಗುಮಾಸ್ತರುಗಳಂಥ ಪೂರ್ವಭಾವೀ ಅಥವಾ ಪೂರಕ ಕೆಲಸದಲ್ಲಿ ನೇರವಾಗಿ ತೊಡಗಿರುವ ವ್ಯಕ್ತಿಗಳಿಗೆ

- ಅನ್ವಯವಾಗತಕ್ಕದ್ದಲ್ಲ.

(2) ಪ್ರಕರಣ 11ರಲ್ಲಿ ಅಥವಾ ಪ್ರಕರಣ 12ರ (1)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ,-

(ಎ) ಮುಖ್ಯವಾಗಿ ಔಷಧಿಗಳ ಅಥವಾ ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಾ ಅಗತ್ಯತೆಗಳ ಅಥವಾ ಸಾಧನ ಸಾಮಗ್ರಿಗಳ ವ್ಯವಹಾರ ನಡೆಸುತ್ತಿರುವ ಅಂಗಡಿಗಳಿಗೆ;

(ಬಿ) ಕ್ಲಬ್ಬುಗಳು, ವಸತಿ ಹೋಟೆಲುಗಳು, ಭೋಜನಗೃಹಗಳು, ಶಾಲೆಗಳು ಅಥವಾ ಕಾಲೇಜುಗಳಿಗೆ ಲಗತ್ತಾದ ಹಾಸ್ಟೆಲುಗಳು ಮತ್ತು ವಿದ್ಯಾರ್ಥಿಗಳ ಮತ್ತು ನಿವಾಸಿ ಮಾಸ್ತರುಗಳ ಊಟ ಮತ್ತು ವಸತಿಗೆ ಸಂಬಂಧಿಸಿದ ಬೋರ್ಡಿಂಗ್ ಶಾಲೆಯಲ್ಲಿ ನಿರ್ವಹಿಸಿಕೊಂಡು ಬರಲಾದ ಕಾರ್ಯಸಂಸ್ಥೆಗಳಿಗೆ

- ಅನ್ವಯವಾಗತಕ್ಕದ್ದಲ್ಲ.

**ವಿವರಣೆ.-** 'ನಿವಾಸಿ-ವಸತಿ ಹೋಟೆಲ್' ಎಂದರೆ, ಯಾವ ಆವರಣದಲ್ಲಿ ಪ್ರಯಾಣಿಕನಿಗೆ ಅಥವಾ ಸಾರ್ವಜನಿಕ ಅಥವಾ ಯಾರೇ ಸಾರ್ವಜನಿಕ ಸದಸ್ಯನಿಗೆ ಅಥವಾ ಸಾರ್ವಜನಿಕ ವರ್ಗಕ್ಕೆ ಹಣದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ವಾಸದ ಸ್ಥಳಾವಕಾಶಕ್ಕಾಗಿ ಅಥವಾ ಊಟದ

ಸರಬರಾಜಿಗಾಗಿ, ಸದ್ಭಾವನೆಯಿಂದ ವ್ಯವಹಾರವನ್ನು ನಡೆಸಲಾಗುತ್ತದೆಯೋ ಆ ಯಾವುದೇ ಆವರಣ;

(ಸಿ) ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಬಂದರುಗಳು ಮತ್ತು ವಿಮಾನ ನಿಲ್ದಾಣಗಳಲ್ಲಿನ ಸ್ಟಾಲುಗಳು ಮತ್ತು ಉಪಹಾರ ಕೋಣೆಗಳು;

(ಡಿ) ಕ್ಷೌರಿಕರ ಮತ್ತು ಹೇರ್ ಡ್ರೆಸರ್‌ಗಳ ಅಂಗಡಿಗಳಿಗೆ;

(ಇ) ಮುಖ್ಯವಾಗಿ, ಮಾಂಸ, ಮೀನು, ಕೋಳಿ ಮೊಟ್ಟೆಗಳು, ಡೈರಿ ಉತ್ಪನ್ನಗಳು (ತುಪ್ಪವನ್ನು ಹೊರತುಪಡಿಸಿ) ಬ್ರೆಡ್, ಮಿಠಾಯಿ, ಸಿಹಿತಿಂಡಿಗಳು, ಚಾಕಲೇಟ್‌ಗಳು, ಐಸ್, ಐಸ್‌ಕ್ರೀಮ್, ಬೇಯಿಸಿದ ಆಹಾರ, ಹಣ್ಣುಗಳು, ಹೂವುಗಳು, ತರಕಾರಿಗಳು ಮತ್ತು ಹಸಿರು ಮೇವು-ಇವುಗಳನ್ನು ವ್ಯಾಪಾರ ಮಾಡುತ್ತಿರುವ ಅಂಗಡಿಗಳಿಗೆ;

(ಎಫ್) ಶವಸಂಸ್ಕಾರ, ಹೂಳುವುದು ಅಥವಾ ಶವದಹನಗಳಿಗಾಗಿ ಅಗತ್ಯವಾದ ವಸ್ತುಗಳ ವ್ಯವಹಾರ ನಡೆಸುತ್ತಿರುವ ಅಂಗಡಿಗಳಿಗೆ;

(ಜಿ) ಆವರಣಗಳಲ್ಲಿ ಸೇವಿಸುವುದಕ್ಕಾಗಿ ಚಿಲ್ಲರೆಯಾಗಿ ಮಾರಾಟ ಮಾಡುವ ಪಾನ್ (ವೀಳ್ಯದೆಲೆ), ಬೀಡಿಗಳು ಅಥವಾ ಸಿಗರೇಟ್ ಸಹಿತ ಪಾನು, ಉಪಹಾರ ಪಾನೀಯಗಳ ವ್ಯಾಪಾರ ನಡೆಸುತ್ತಿರುವ ಅಂಗಡಿಗಳಿಗೆ;

(ಎಚ್) ವೃತ್ತಪತ್ರಿಕೆಗಳ ಅಥವಾ ನಿಯತಕಾಲಿಕಗಳ ವ್ಯಾಪಾರ ನಡೆಸುತ್ತಿರುವ ಅಂಗಡಿಗಳಿಗೆ, ವೃತ್ತಪತ್ರಿಕಾ ಕಚೇರಿಗಳಲ್ಲಿನ ಸಂಪಾದನಾ ವಿಭಾಗ ಕಚೇರಿಗಳಿಗೆ ಮತ್ತು ವಾರ್ತಾ ಏಜೆನ್ಸಿಗಳ ಕಚೇರಿಗಳಿಗೆ;

(ಐ) ಸಿನಿಮಾಗಳಿಗೆ, ಥಿಯೇಟರುಗಳಿಗೆ ಮತ್ತು ಸಾರ್ವಜನಿಕ ಮನೋರಂಜನೆಯ ಇತರ ಸ್ಥಳಗಳಿಗೆ ಮತ್ತು ಅಂಥ ಸಿನಿಮಾಗಳಿಗೆ, ಥಿಯೇಟರುಗಳಿಗೆ ಮತ್ತು ಸಾರ್ವಜನಿಕ ಮನೋರಂಜನಾ ಸ್ಥಳಗಳಿಗೆ ಲಗತ್ತಾದ ಸ್ಟಾಲುಗಳಿಗೆ ಮತ್ತು ಉಪಹಾರ ಕೋಣೆಗಳಿಗೆ;

(ಜೆ) ಪೆಟ್ರೋಲಿನ ಚಿಲ್ಲರೆ ಮಾರಾಟಕ್ಕಾಗಿನ ಕಾರ್ಯಸಂಸ್ಥೆಗಳಿಗೆ;

(ಕೆ) ರೆಜಿಮೆಂಟಲ್ ಸಂಸ್ಥೆಗಳಲ್ಲಿನ ಅಂಗಡಿಗಳಿಗೆ, ದಂಡು ಪ್ರದೇಶಗಳಲ್ಲಿನ ಗ್ಯಾರಿಸನ್ ಅಂಗಡಿಗಳಿಗೆ ಮತ್ತು ಸೇನಾ ಕ್ಯಾಂಟೀನುಗಳಿಗೆ;

(ಎಲ್) ಚರ್ಮ ಹದಮಾಡುವ ಸ್ಥಳಗಳಿಗೆ;

(ಎಂ) ವಸ್ತು ಪ್ರದರ್ಶನದಲ್ಲಿ ಅಥವಾ ಪ್ರದರ್ಶನದಲ್ಲಿ ನಡೆಸುವ ವ್ಯಾಪಾರವು, ಅದರ ಮುಖ್ಯ ಉದ್ದೇಶಕ್ಕೆ ಪೂರಕವಾಗಿದ್ದರೆ ಅಥವಾ ಸಹಾಯಕವಾದ ಚಿಲ್ಲರೆ ವ್ಯಾಪಾರವಾಗಿದ್ದರೆ, ವಸ್ತು ಪ್ರದರ್ಶನ ಅಥವಾ ಪ್ರದರ್ಶನದಲ್ಲಿ ನಡೆಸಲಾಗುತ್ತಿರುವ ಅಂಥ ಚಿಲ್ಲರೆ ವ್ಯಾಪಾರಕ್ಕೆ;

(ಎನ್) ಕಾರ್ಖಾನೆಗಳ ಅಧಿನಿಯಮ, 1948 ರ ಮೇರೆಗೆ ನೋಂದಾಯಿತವಾಗಿಲ್ಲದ ಎಣ್ಣೆ ಗಿರಣಿಗಳಿಗೆ ಮತ್ತು ಹಿಟ್ಟಿನ ಗಿರಣಿಗಳಿಗೆ;

(ಒ) ಇಟ್ಟಿಗೆ ಮತ್ತು ಸುಣ್ಣದ ಗೂಡುಗಳಿಗೆ;

(ಪಿ) ಮನೆ ಬಳಕೆಗಾಗಿ ಕಂಚು ಮತ್ತು ಹಿತ್ತಾಳೆ ಪಾತ್ರೆಗಳ ತಯಾರಿಕೆಗಾಗಿ ಕುಲುಮೆಗಳಲ್ಲಿ ಲೋಹವನ್ನು ಕರಗಿಸುವ ಕಾರ್ಯವಿಧಾನಕ್ಕೆ ಸೀಮಿತವಾಗಿರುವಷ್ಟರ ಮಟ್ಟಿಗೆ, ಕಾರ್ಯನಿರತವಾದ ವಾಣಿಜ್ಯ ಕಾರ್ಯಸಂಸ್ಥೆಗಳಿಗೆ;

[1][(ಕ್ಯೂ) ಮಾಹಿತಿ ತಂತ್ರಜ್ಞಾನ ಕಾರ್ಯಸಂಸ್ಥೆಗಳಿಗೆ;

(ಆರ್) ಮಾಹಿತಿ ತಂತ್ರಜ್ಞಾನ ಒದಗಿಸುವ ಸೇವೆಗಳಿಗೆ ಮತ್ತು ಕಾರ್ಯಸಂಸ್ಥೆಗಳಿಗೆ;

(ಎಸ್) ಜೈವಿಕ ತಂತ್ರಜ್ಞಾನ ಮತ್ತು ಸಂಶೋಧನಾ ಕೇಂದ್ರಗಳಿಗೆ ಅಥವಾ ಸಾಂಕ್ರಾಮಿಕ ಮತ್ತು ಇತರ ರೋಗಗಳ ಕಾರ್ಯಸಂಸ್ಥೆಗಳಿಗೆ][1]

- ಅನ್ವಯವಾಗತಕ್ಕದ್ದಲ್ಲ.

1. 2001ರ ಅಧಿನಿಯಮ 11ರ ಮೂಲಕ 1.06.2001 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

(3) ಉಪ-ಪ್ರಕರಣ (1)ರಲ್ಲಿ ಅಥವಾ ಉಪ-ಪ್ರಕರಣ (2)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯಸಂಸ್ಥೆಯನ್ನು ಅಥವಾ ವ್ಯಕ್ತಿಯನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ, ಈ ಅಧಿನಿಯಮದ ಉಪಬಂಧಗಳ ಪ್ರವರ್ತನೆಯಿಂದ ವಿನಾಯಿತಿಗೊಳಿಸತಕ್ಕದ್ದಲ್ಲವೆಂದು ಮತ್ತು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ, ಈ ಅಧಿನಿಯಮದ ಉಪಬಂಧಗಳು ಅಂಥ ಕಾರ್ಯಸಂಸ್ಥೆಗೆ ಅಥವಾ ವ್ಯಕ್ತಿಗೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು.

(4) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಯಾವ ಕಾರ್ಯಸಂಸ್ಥೆಯಲ್ಲಿ ಕೆಲಸದ ಸ್ವರೂಪವು,-

(i) ಬಿಟ್ಟುಬಿಟ್ಟು ಬರುವುದೋ; ಅಥವಾ

(ii) ಕಾಲಿಕವಾಗಿರುವುದೋ; ಅಥವಾ

(iii) ಎರಡು ತಿಂಗಳುಗಳಿಗೆ ಮೀರದ ಕಡಿಮೆ ಅವಧಿಯದ್ದಾಗಿರುವುದೋ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ಕಷ್ಟವಾಗಿರುವುದೋ

- ಆ ಕಾರ್ಯಸಂಸ್ಥೆಗಳನ್ನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

## ಅಧ್ಯಾಯ II
## ಕಾರ್ಯಸಂಸ್ಥೆಗಳ ನೋಂದಣಿ

**4. ಕಾರ್ಯಸಂಸ್ಥೆಗಳ ನೋಂದಣಿ.-** (1) ಉಪ-ಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು ಸಂಬಂಧಪಟ್ಟ ಪ್ರದೇಶದ ಪರಿಶೀಲಕನಿಗೆ ನಿಯಮಿಸಬಹುದಾದಂಥ ಫೀಜುಗಳೊಂದಿಗೆ ನಿಯಮಿಸಿದ ನಮೂನೆಯಲ್ಲಿ,-

(ಎ) ನಿಯೋಜಕನು ಮತ್ತು ವ್ಯವಸ್ಥಾಪಕನು ಯಾರಾದರೂ ಇದ್ದರೆ ಆತನ ಹೆಸರು;

(ಬಿ) ಆ ಕಾರ್ಯಸಂಸ್ಥೆಯ ಅಂಚೆ ವಿಳಾಸ;

(ಸಿ) ಆ ಕಾರ್ಯಸಂಸ್ಥೆಯ ಹೆಸರು, ಯಾವುದಾದರೂ ಇದ್ದರೆ ಅದರ ಹೆಸರು;

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು

- ಇವುಗಳನ್ನೊಳಗೊಂಡ ವಿವರಪತ್ರವನ್ನು ಕಳುಹಿಸತಕ್ಕದ್ದು.

(2) ಆ ವಿವರಪತ್ರವನ್ನು ಮತ್ತು ಫೀಜುಗಳನ್ನು ಸ್ವೀಕರಿಸಿದ ಮೇಲೆ ಪರಿಶೀಲಕನು ಆ ವಿವರಪತ್ರದ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ, ನಿಯಮಿಸಬಹುದಾದಂಥ ರೀತಿಯಲ್ಲಿ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಆ ಕಾರ್ಯಸಂಸ್ಥೆಯನ್ನು ನೋಂದಾಯಿಸತಕ್ಕದ್ದು ಮತ್ತು ನಿಯಮಿಸಿದ ನಮೂನೆಯಲ್ಲಿ ನಿಯೋಜಕನಿಗೆ ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ಆ ಕಾರ್ಯಸಂಸ್ಥೆಯಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

(3) ಈ ಕೆಳಗಿನ (1)ನೇ ಅಂಕಣದಲ್ಲಿ ನಮೂದಿಸಿದ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ (2)ನೇ ಅಂಕಣದಲ್ಲಿ ನಮೂದಿಸಿದ ದಿನಾಂಕದಿಂದ ಮೂವತ್ತು ದಿವಸದೊಳಗೆ ಫೀಜುಗಳೊಂದಿಗೆ ಆ ವಿವರಪತ್ರವನ್ನು (1)ನೇ ಉಪ-ಪ್ರಕರಣದ ಮೇರೆಗೆ ಪರಿಶೀಲಕನಿಗೆ ಕಳುಹಿಸತಕ್ಕದ್ದು.

| ಕಾರ್ಯಸಂಸ್ಥೆಗಳು. | | ಯಾವ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯು ಪ್ರಾರಂಭವಾಗಬೇಕೋ ಆ ದಿನಾಂಕ | |
|---|---|---|---|
| (1) | | (2) | |
| (i) | ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಅಸ್ತಿತ್ವದಲ್ಲಿರುವ | (i) | ಈ ಅಧಿನಿಯಮ ಜಾರಿಗೆ ಬಂದ ದಿನಾಂಕ. |

| | | | |
|---|---|---|---|
| | ಕಾರ್ಯಸಂಸ್ಥೆ. | | |
| (ii) | ಹೊಸ ಕಾರ್ಯಸಂಸ್ಥೆಗಳು. | (ii) | ಕಾರ್ಯಸಂಸ್ಥೆಯು ಅದರ ಕೆಲಸವನ್ನು ಪ್ರಾರಂಭಿಸುವ ದಿನಾಂಕ. |

[1][(3ಎ) (3)ನೇ ಉಪ-ಪ್ರಕರಣದ ಮೇರೆಗಿನ ಫೀಜುಗಳೊಂದಿಗೆ ಸಲ್ಲಿಸಿದ ವಿವರಪತ್ರದ ಸರಿತನದ ಬಗ್ಗೆ ಪರಿಶೀಲಕನಿಗೆ ಮನವರಿಕೆಯಾಗದಿದ್ದಲ್ಲಿ, ಅವನು ಅದನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ, ಕಾರ್ಯಸಂಸ್ಥೆಯ ನೋಂದಣಿಯನ್ನು ನಿರಾಕರಿಸಿದ ಬಗ್ಗೆ ಅದರ ಕಾರಣಗಳೊಂದಿಗೆ, ತನ್ನ ನಿರ್ಣಯವನ್ನು ನಿಯೋಜಕನಿಗೆ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಕಾರ್ಯಸಂಸ್ಥೆಯನ್ನು ನೋಂದಣಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.][1]

1. 2005 ರ ಅಧಿನಿಯಮ 28 ರ ಮೂಲಕ (3ಎ) ಉಪ-ಪ್ರಕರಣವನ್ನು ಅಧಿಸೂಚನೆ ಮೂಲಕ ಸೇರಿಸಲಾಗಿದೆ. ಅಧಿನಿಯಮವು ಇನ್ನೂ ಜಾರಿಗೆ ಬರಬೇಕು.

[1][(4) (2)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ನೋಂದಣಿ ಪ್ರಮಾಣಪತ್ರವು [2][ಐದು ವರ್ಷಗಳವರೆಗೆ][2] ಸಿಂಧುವಾಗಿರತಕ್ಕದ್ದು ಮತ್ತು [2][ನೋಂದಣಿ ಪ್ರಮಾಣಪತ್ರದ ಅವಧಿಯು, ಮುಕ್ತಾಯಕ್ಕೆ ಮೊದಲು][2] ನಿಯಮಿಸಬಹುದಾದಂಥ ಫೀಜುಗಳ ಸಂದಾಯದ ಮೇಲೆ ಮತ್ತು ಅಂಥ ರೀತಿಯಲ್ಲಿ ನವೀಕರಿಸತಕ್ಕದ್ದು.

1. 1982ರ ಅಧಿನಿಯಮ 33ರ ಮೂಲಕ 4.12.1982 ರಿಂದ ಜಾರಿಗೆ ಬರುವಂತೆ 4 ಮತ್ತು 5ನೇ ಉಪ-ಪ್ರಕರಣಗಳನ್ನು ಸೇರಿಸಲಾಗಿದೆ.
2. 1997ರ ಅಧಿನಿಯಮ 25 ರ ಮೂಲಕ 12.2.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(5) ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1997 ರ ಪ್ರಾರಂಭಕ್ಕೆ ಮುಂಚೆ ನೀಡಿದ್ದ ಅಥವಾ ನವೀಕರಿಸಿದ್ದ ನೋಂದಣಿ ಪ್ರಮಾಣಪತ್ರವು, ಅಂಥ ಪ್ರಾರಂಭದ ದಿನಾಂಕದಿಂದ ಈಗಾಗಲೇ ಹಾಗೆ ನೀಡಿದ್ದ ನೋಂದಣಿ ಪ್ರಮಾಣಪತ್ರದ ಅವಧಿಯು, ಅದು ಮುಕ್ತಾಯವಾಗುವವರೆಗೆ ಸಿಂಧುವಾಗಿರುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು (4)ನೇ ಉಪ-ಪ್ರಕರಣದ ಅನುಸಾರ ಅಂಥ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ತನ್ನ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸತಕ್ಕದ್ದು.][1]][1]

1.1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(6) ವಿವರಪತ್ರದ ಅಥವಾ ನವೀಕರಣದ ಅರ್ಜಿಯ ಅಥವಾ ನಿಯಮಿಸಿದ ಫೀಜುಗಳ ಪಾವತಿಯ ಬಗ್ಗೆ ಅಥವಾ ನವೀಕರಣದ ಯಾವುದೇ ಇತರ ಷರತ್ತಿನ ಸರಿತನದ ಬಗ್ಗೆ ಪರಿಶೀಲಕನಿಗೆ ಮನವರಿಕೆಯಾಗದಿದ್ದಲ್ಲಿ, ನಿಯೋಜಕನು, ನೋಂದಣಿ ಪ್ರಮಾಣಪತ್ರದ ನವೀಕರಣಕ್ಕಾಗಿ ಕೋರಿ, ಶುಲ್ಕಗಳೊಂದಿಗೆ ಸಲ್ಲಿಸಿದ್ದ ವಿವರಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ, ಅದರ ನೋಂದಣಿಯ ನವೀಕರಣವನ್ನು ನಿರಾಕರಿಸಿದ್ದಕ್ಕಾಗಿನ ಕಾರಣಗಳೊಂದಿಗೆ ತನ್ನ ನಿರ್ಣಯವನ್ನು ಪರಿಶೀಲಕನು ನಿಯೋಜಕನಿಗೆ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು.

(7) ಯಾರೇ ನಿಯೋಜಕನು, ನೋಂದಣಿ ಪ್ರಮಾಣಪತ್ರವನ್ನು ಅಥವಾ ನೋಂದಣಿ ಪ್ರಮಾಣಪತ್ರದ ನವೀಕರಣವನ್ನು (3ಎ) ಅಥವಾ (6)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ವೀಕರಿಸದಿದ್ದರೆ, ಅಂಥ ನಿಯೋಜಕನು, ಭಾವಿತ ಪ್ರಯೋಜನ ಪಡೆದಿದ್ದಾನೆ ಎಂದು ತಿಳಿಸಿ, ನೋಂದಣಿಗಾಗಿ ಅಥವಾ ಸಂದರ್ಭಾನುಸಾರ ನವೀಕರಣಕ್ಕಾಗಿ ಕೋರಿ ನೋಂದಣಿ ಪ್ರಾಧಿಕಾರಕ್ಕೆ ಸ್ವೀಕೃತಿ ಪತ್ರ ಸಹಿತವಾದ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದ ಸ್ವಪ್ರಮಾಣೀಕೃತ ವಿವರಣಪತ್ರವನ್ನು ಪ್ರದರ್ಶಿಸತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ಅಥವಾ ಸಂದರ್ಭಾನುಸಾರ ಪ್ರಮಾಣಪತ್ರದ ನವೀಕರಣವನ್ನು, ನಿಯೋಜಕನು ತರುವಾಯ ಸ್ವೀಕರಿಸಿದರೆ, ಅಂಥ ಕ್ರಮಬದ್ಧ ಪ್ರಮಾಣಪತ್ರವನ್ನು ಸ್ವೀಕರಿಸಿದ ಕೂಡಲೇ, ಸ್ವಪ್ರಮಾಣೀಕೃತ ಪತ್ರವನ್ನು ಬದಲಾಯಿಸತಕ್ಕದ್ದು.

(8) ಯಾರೇ ನಿಯೋಜಕನು (7)ನೇ ಉಪ-ಪ್ರಕರಣದ ಮೇರೆಗೆ ಭಾವಿತ ನೋಂದಣಿ ಪ್ರಯೋಜನವನ್ನು ತಪ್ಪಾಗಿ ಕ್ಲೇಮು ಮಾಡಿದರೆ ಮತ್ತು ಅಂಥ ಸ್ವಪ್ರಮಾಣೀಕೃತ ಪ್ರಮಾಣಪತ್ರವನ್ನು

ಪ್ರದರ್ಶಿಸಿದರೆ, ಅವನು, ಆರು ತಿಂಗಳುಗಳಿಗಿಂತ ಕಡಿಮೆಯಿರದ ಕಾರಾವಾಸದೊಂದಿಗೆ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಶಿಕ್ಷೆಗೆ ಗುರಿಯಾಗತಕ್ಕದ್ದು.][1]

1. 2005 ರ ಅಧಿನಿಯಮ 28 ರ ಮೂಲಕ (6), (7) ಮತ್ತು (8)ನೇ ಉಪ-ಪ್ರಕರಣಗಳನ್ನು ಅಧಿಸೂಚನೆ ಮೂಲಕ ಸೇರಿಸಲಾಗಿದೆ. ಅಧಿನಿಯಮವು ಇನ್ನೂ ಜಾರಿಗೆ ಬರಬೇಕು.

**5. ಪರಿಶೀಲಕನಿಗೆ ಬದಲಾವಣೆಯನ್ನು ತಿಳಿಸುವುದು.-** ಬದಲಾವಣೆಯು ಆದ ತರುವಾಯ ಹದಿನೈದು ದಿವಸಗಳೊಳಗೆ, ನಿಯೋಜಕನು 4ನೇ ಪ್ರಕರಣದ ಮೇರೆಗೆ ತಾನು ಸಲ್ಲಿಸಿದ್ದ ವಿವರಣಪತ್ರದಲ್ಲಿ ಒಳಗೊಂಡಿದ್ದ ಯಾವುದೇ ಮಾಹಿತಿಗೆ ಸಂಬಂಧಿಸಿದಂತೆ, ಯಾವುದೇ ಬದಲಾವಣೆಯನ್ನು, ನಿಯಮಿಸಿದ ನಮೂನೆಯಲ್ಲಿ ಪರಿಶೀಲಕನಿಗೆ ತಿಳಿಸುವುದು ಅವನ ಕರ್ತವ್ಯವಾಗಿರತಕ್ಕದ್ದು. ಪರಿಶೀಲಕನು, ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ಮತ್ತು ಅದರ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಆ ಬದಲಾವಣೆಯನ್ನು ಮಾಡತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು ಅಥವಾ ಅವಶ್ಯವಾದರೆ ಹೊಸ ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕದ್ದು.

**6. ಕಾರ್ಯಸಂಸ್ಥೆಯನ್ನು ಮುಚ್ಚುವ ಬಗ್ಗೆ ಪರಿಶೀಲಕನಿಗೆ ತಿಳಿಸುವುದು.-** ನಿಯೋಜಕನು, ತನ್ನ ಕಾರ್ಯಸಂಸ್ಥೆಯನ್ನು ಮುಚ್ಚಿದ ಹದಿನೈದು ದಿವಸಗಳೊಳಗಾಗಿ, ಅಂಥ ಮುಚ್ಚುವಿಕೆಯ ದಿನಾಂಕವನ್ನು ಪರಿಶೀಲಕನಿಗೆ ಬರಹದಲ್ಲಿ ತಿಳಿಸತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ಹಿಂತಿರುಗಿಸತಕ್ಕದ್ದು. ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಮತ್ತು ಅದರ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಅಂಥ ಕಾರ್ಯಸಂಸ್ಥೆಯನ್ನು ಕಾರ್ಯಸಂಸ್ಥೆಗಳ ರಿಜಿಸ್ಟರಿನಿಂದ ತೆಗೆದುಹಾಕತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸತಕ್ಕದ್ದು:

ಪರಂತು, ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸದಿದ್ದರೆ, ಆದರೆ ಕಾರ್ಯಸಂಸ್ಥೆಯನ್ನು ಮುಚ್ಚಲಾಗಿದೆಯೆಂದು ಮನದಟ್ಟು ಮಾಡಿಕೊಂಡರೆ, ಅವನು ಅಂಥ ರಿಜಿಸ್ಟರಿನಿಂದ ಅಂಥ ಕಾರ್ಯಸಂಸ್ಥೆಯನ್ನು ತೆಗೆದುಹಾಕಬಹುದು.

[1][**6ಎ. ನೇಮಕ ಆದೇಶಗಳನ್ನು ನೀಡುವುದು.-** ಪ್ರತಿಯೊಬ್ಬ ನಿಯೋಜಕನು, ತನ್ನ ಕಾರ್ಯಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕಡೆಯಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿಗೆ ಅವನ ಹೆಸರು, ಪದನಾಮ, ಅಂಥ ವ್ಯಕ್ತಿಯ ಮಜೂರಿಯ ಪ್ರಮಾಣಪತ್ರ ಮತ್ತು ಆತನ ಕೆಲಸದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಲಿಖಿತದಲ್ಲಿ ತಿಳಿಸಿ, ನೇಮಕ ಆದೇಶವನ್ನು ನೀಡತಕ್ಕದ್ದು ಮತ್ತು ಅದನ್ನು ತನ್ನ ಕಾರ್ಯಸಂಸ್ಥೆಯಲ್ಲಿ ನೇಮಕವಾದ ದಿನಾಂಕದಿಂದ 30 ದಿನಗಳ ಒಳಗಾಗಿ ಅಂಥ ವ್ಯಕ್ತಿಗೆ ತಲುಪುವಂತೆ ಮಾಡತಕ್ಕದ್ದು:

ಪರಂತು, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭಕ್ಕೆ ಮೊದಲು ಯಾವುದೇ ಕಾರ್ಯಸಂಸ್ಥೆಯಲ್ಲಿ ನೇಮಕಗೊಂಡಿದ್ದ ನಿಯೋಜಿತರು ಇದ್ದರೆ, ಅಂಥ ಕಾರ್ಯಸಂಸ್ಥೆಯ ನಿಯೋಜಕನು, ಅಂಥ ನಿಯೋಜಿತರಿಗೆ ಲಿಖಿತದಲ್ಲಿ ಯಾವುದೇ ನೇಮಕದ ಆದೇಶವನ್ನು ಇನ್ನೂ ನೀಡಿಲ್ಲದಿದ್ದರೆ, ಅದರಲ್ಲಿ ಅಂಥ ನಿಯೋಜಿತನ ಹೆಸರು, ಪದನಾಮ ಮತ್ತು ಮಜೂರಿಯ ಪ್ರಮಾಣ ಮತ್ತು ಕೆಲಸದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಸೇರಿಸಿ ಆ ನಿಯೋಜಿತನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು ಮತ್ತು ಅಂಥ ಪ್ರಾರಂಭದ ದಿನಾಂಕದಿಂದ 30 ದಿನಗಳ ಒಳಗಾಗಿ ಅವನಿಗೆ ಅದನ್ನು ಜಾರಿಗೊಳಿಸತಕ್ಕದ್ದು.][1]

1.1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ III
## ಕೆಲಸದ ಗಂಟೆಗಳು

**7. ದೈನಂದಿನ ಮತ್ತು ವಾರದ ಗಂಟೆಗಳು.-** (1) ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾರೇ ನಿಯೋಜಿತನನ್ನು ಯಾವುದೇ ದಿವಸದಂದು ಒಂಬತ್ತು ಗಂಟೆಗಳಿಗಿಂತ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ:

ಪರಂತು, ಅಧಿಕಕಾಲಿಕ ಕೆಲಸವನ್ನು ಒಳಗೊಂಡ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು, ದಾಸ್ತಾನಿನ ಲೆಕ್ಕ ತೆಗೆದುಕೊಳ್ಳುವುದು ಮತ್ತು ಲೆಕ್ಕಪತ್ರಗಳ ತಯಾರಿಕೆಯ ದಿವಸಗಳನ್ನು ಹೊರತುಪಡಿಸಿ, ಯಾವುದೇ ದಿವಸದಲ್ಲಿ ಹತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ:

ಮತ್ತೂ ಪರಂತು, ನಿಯೋಜಿತನು ಕೆಲಸ ಮಾಡಿದ ಅಧಿಕಕಾಲಿಕ ಗಂಟೆಗಳ ಒಟ್ಟು ಸಂಖ್ಯೆಯು ಮೂರು ತಿಂಗಳುಗಳ ಅವಧಿಯಲ್ಲಿ ಐವತ್ತು ಗಂಟೆಗಳನ್ನು ಮೀರಕೂಡದು.

(2) [1][x x x][1] ಯಾರೇ ಯುವ ವ್ಯಕ್ತಿಯನ್ನು ಒಂದು ದಿವಸದಲ್ಲಿ ಐದು ಗಂಟೆಗಳಿಗಿಂತ ಹೆಚ್ಚಾಗಿ ಯಾವುದೇ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ.

1. 1997 ರ ಅಧಿನಿಯಮ 25ರ ಮೂಲಕ 12.2.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**8. ಅಧಿಕಕಾಲಿಕ ಕೆಲಸಕ್ಕಾಗಿ ಹೆಚ್ಚಿನ ಮಜೂರಿಗಳು.-** (1) ನಿಯೋಜಿತನು ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ದಿವಸದಂದು ಒಂಬತ್ತು ಗಂಟೆಗಳಿಗಿಂತ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡುವಲ್ಲಿ, ಅವನು ಅಂಥ ಅಧಿಕಕಾಲಿಕ ಕೆಲಸಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಮಜೂರಿಗಳ ದರದ ಎರಡರಷ್ಟು ಮಜೂರಿಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ "ಸಾಮಾನ್ಯ ಮಜೂರಿಗಳು" ಎಂದರೆ, ಆಹಾರಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ರಿಯಾಯಿತಿ ಮಾರಾಟದ ಮೂಲಕ, ಒದಗಿಬರುವ ಪ್ರಯೋಜನಕ್ಕೆ ಸಮಾನ ನಗದನ್ನು ಒಳಗೊಂಡ ಮೂಲ ಮಜೂರಿಗಳು ಮತ್ತು ಅಂಥ ಭತ್ಯೆಗಳು, ಆದರೆ ಬೋನಸನ್ನು ಒಳಗೊಳ್ಳುವುದಿಲ್ಲ.

(3) ಆಹಾರಧಾನ್ಯಗಳ ಮತ್ತು ಇತರ ವಸ್ತುಗಳ ರಿಯಾಯಿತಿ ಮಾರಾಟದ ಮೂಲಕ ಒದಗಿಬರುವ ಪ್ರಯೋಜನಕ್ಕೆ ಸಮಾನ ನಗದನ್ನು, ಉತ್ತಮ ಸ್ಥಿತಿಯಲ್ಲಿರುವ ಕುಟುಂಬಕ್ಕೆ ಕೊಡಬಹುದಾದ ಆಹಾರಧಾನ್ಯಗಳ ಮತ್ತು ಇತರ ವಸ್ತುಗಳ ಗರಿಷ್ಠ ಪ್ರಮಾಣದ ಆಧಾರದ ಮೇಲೆ ಆಗಾಗ್ಗೆ ನಿಯಮಿಸಬಹುದಾದಂತೆ ಲೆಕ್ಕಹಾಕತಕ್ಕದ್ದು.

**ವಿವರಣೆ 1.-** "ಉತ್ತಮ ಸ್ಥಿತಿಯಲ್ಲಿರುವ ಕುಟುಂಬ" ಎಂದರೆ, ಒಟ್ಟು ಮೂರು ಜನ ವಯಸ್ಕರ ಆಹಾರಬಳಕೆ ಯೂನಿಟ್‌ಗಳು ಬೇಕಾಗುವಷ್ಟು ನಿಯೋಜಿತ, ಅವನ ಅಥವಾ ಅವಳ ಗಂಡ/ಹೆಂಡತಿ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗಿಂತ ಕಡಿಮೆಯ ಎರಡು ಮಕ್ಕಳನ್ನು ಒಳಗೊಂಡ ಕುಟುಂಬ.

**ವಿವರಣೆ 2.-** "ವಯಸ್ಕರ ಆಹಾರಬಳಕೆ ಯೂನಿಟ್" ಎಂದರೆ, ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನ, ಆಹಾರಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳಿಗೆ ಮೇಲ್ಪಟ್ಟ ಮಹಿಳೆಯ ಆಹಾರಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳ ಕಡಿಮೆ ಇರುವ ಮಗುವಿನ ಆಹಾರಬಳಕೆ ಯೂನಿಟ್ ಇವುಗಳನ್ನು ಒಂದು ವಯಸ್ಕ ಆಹಾರಬಳಕೆ ಯೂನಿಟ್‌ನ್ನು, ಅನುಕ್ರಮವಾಗಿ 8 ಮತ್ತು 6ರ ದರಗಳಲ್ಲಿ ಲೆಕ್ಕಹಾಕತಕ್ಕದ್ದು.

(4) ರಾಜ್ಯಸರ್ಕಾರವು,-

(ಎ) ಯಾವ ರೀತಿಯಲ್ಲಿ ಆಹಾರಧಾನ್ಯಗಳ ಮತ್ತು ಇತರ ವಸ್ತುಗಳ ರಿಯಾಯಿತಿ ಮಾರಾಟದ ಮೂಲಕ ಕೆಲಸಗಾರನಿಗೆ ಒದಗಿಸಿರುವ ಪ್ರಯೋಜನಕ್ಕೆ ಸಮಾನವಾದ ನಗದನ್ನು ಲೆಕ್ಕ ಹಾಕತಕ್ಕದ್ದೋ ಆ ರೀತಿಯನ್ನು;

(ಬಿ) ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಯಸಂಸ್ಥೆಯಲ್ಲಿ ಇಟ್ಟುಕೊಂಡು ಬರತಕ್ಕ ರಿಜಿಸ್ಟರನ್ನು

- ನಿಯಮಿಸುವ ನಿಯಮಗಳನ್ನು ರಚಿಸಬಹುದು.

**9. ವಿಶ್ರಾಂತಿಗಾಗಿ ಬಿಡುವು.-** ಪ್ರತಿ ದಿವಸ ಕಾರ್ಯಸಂಸ್ಥೆಯಲ್ಲಿನ ನಿಯೋಜಿತನ ಕೆಲಸದ ಅವಧಿಗಳನ್ನು, ಯಾವುದೇ ಅವಧಿಯು, ಐದು ಗಂಟೆಗಳನ್ನು ಮೀರದಂತೆ ನಿಗದಿ ಮಾಡತಕ್ಕದ್ದು ಮತ್ತು ಅಂಥ ಯಾರೇ ವ್ಯಕ್ತಿಯು ಅವನು ಕನಿಷ್ಠಪಕ್ಷ ಒಂದು ಗಂಟೆ ವಿಶ್ರಾಂತಿಯ ಬಿಡುವನ್ನು ಪಡೆಯದೇ ಐದು ಗಂಟೆಗಳನ್ನು ಮೀರಿ ಕೆಲಸ ಮಾಡತಕ್ಕದ್ದಲ್ಲ.

**10. ಹರವು.-** ಕಾರ್ಯಸಂಸ್ಥೆಯಲ್ಲಿನ ನಿಯೋಜಿತನ ಕೆಲಸದ ಅವಧಿಗಳು, ಅವನ ವಿಶ್ರಾಂತಿಗಾಗಿನ ಬಿಡುವನ್ನೊಳಗೊಂಡು, ಅವುಗಳ ಯಾವುದೇ ದಿವಸದಲ್ಲಿ ಹನ್ನೆರಡು ಗಂಟೆಗಳಿಗಿಂತ ಹೆಚ್ಚಾಗಿ ಹರಡಿರತಕ್ಕದ್ದಲ್ಲ.

**11. ತೆರೆಯುವ ಮತ್ತು ಮುಚ್ಚುವ ವೇಳೆಗಳು.-** (1) ಯಾವುದೇ ದಿವಸದಂದು ಯಾವುದೇ ಕಾರ್ಯಸಂಸ್ಥೆಯನ್ನು ರಾಜ್ಯ ಸರ್ಕಾರವು ಹೊರಡಿಸಿದ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ವೇಳೆಗಳಿಗಿಂತ ಮುಂಚೆ ತೆರೆಯತಕ್ಕದ್ದಲ್ಲ ಮತ್ತು ಅಂಥ ವೇಳೆಗಳ ತರುವಾಯ ಮುಚ್ಚತಕ್ಕದ್ದಲ್ಲ:

ಪರಂತು, ಯಾವುದೇ ಕಾರ್ಯಸಂಸ್ಥೆಯನ್ನು ಮುಚ್ಚುವುದಕ್ಕಾಗಿ ನಿಗದಿಪಡಿಸಿದ ವೇಳೆಯಲ್ಲಿ, ಆ ಕಾರ್ಯಸಂಸ್ಥೆಯಲ್ಲಿ ಅದರಲ್ಲಿ ಗ್ರಾಹಕನಿಗೆ ಬೇಕಾದುದನ್ನು ಒದಗಿಸಲಾಗುತ್ತಿದ್ದ ಅಥವಾ ಬೇಕಾದುದನ್ನು ಪಡೆಯುವುದಕ್ಕೆ ಕಾಯುತ್ತಿದ್ದ ಯಾರೇ ಗ್ರಾಹಕನಿಗೆ, ಅಂಥ ವೇಳೆಯ ನಿಕಟೋತ್ತರದ ಕಾಲು ಗಂಟೆಯ ಅವಧಿಯಲ್ಲಿ ಒದಗಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ರಾಜ್ಯ ಸರ್ಕಾರವು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದು.

(3) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ ಬೇರೆ ಬೇರೆ ಕಾರ್ಯಸಂಸ್ಥೆಗಳು ಅಥವಾ ಕಾರ್ಯಸಂಸ್ಥೆಯ ಬೇರೆ ಬೇರೆ ವರ್ಗಗಳಿಗೆ ಅಥವಾ ಬೇರೆ ಪ್ರದೇಶಗಳಿಗಾಗಿ ಅಥವಾ ವರ್ಷದ ಬೇರೆ ಬೇರೆ ಕಾಲಗಳಿಗೆ ಬೇರೆ ಬೇರೆ ವೇಳೆಗಳನ್ನು ನಿಗದಿಪಡಿಸಬಹುದು.

**12. ವಾರದ ರಜಾ ದಿವಸಗಳು.-** (1) ಪ್ರತಿಯೊಂದು ಕಾರ್ಯಸಂಸ್ಥೆಯನ್ನು, ವಾರದಲ್ಲಿ ಒಂದು ದಿವಸ ಮುಚ್ಚಿರತಕ್ಕದ್ದು. ನಿಯೋಜಕನು ಅಂಥ ದಿನಾಂಕವನ್ನು ಆ ವರ್ಷದ ಪ್ರಾರಂಭದಲ್ಲಿ [1][ಅಥವಾ ಸಂದರ್ಭಾನುಸಾರ, ಕಾರ್ಯಸಂಸ್ಥೆಗಳು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ][1] ನಿಗದಿಪಡಿಸತಕ್ಕದ್ದು. ಅದನ್ನು ಪರಿಶೀಲಕನಿಗೆ ತಿಳಿಸತಕ್ಕದ್ದು ಮತ್ತು ಅದನ್ನು ಕಾರ್ಯಸಂಸ್ಥೆಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸಿದ ನೋಟೀಸಿನಲ್ಲಿ ಅದನ್ನು ನಿರ್ದಿಷ್ಟಪಡಿಸತಕ್ಕದ್ದು. ನಿಯೋಜಕನು ಅಂಥ ದಿನಾಂಕವನ್ನು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚು ಸಲ ಬದಲಾಯಿಸತಕ್ಕದ್ದಲ್ಲ; ಆ ಬದಲಾವಣೆಯನ್ನು ಪರಿಶೀಲಕನಿಗೆ ತಿಳಿಸತಕ್ಕದ್ದು ಮತ್ತು ಕಾರ್ಯಸಂಸ್ಥೆಯಲ್ಲಿನ ನೋಟೀಸಿನಲ್ಲಿ ಅವಶ್ಯಕ ಬದಲಾವಣೆಗಳನ್ನು ಮಾಡತಕ್ಕದ್ದು.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಜ್ಯ ಸರ್ಕಾರವು ಈ ಪ್ರಕರಣದ (3)ನೇ ಉಪ-ಪ್ರಕರಣದ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಹೆಚ್ಚುವರಿ ಸಿಬ್ಬಂದಿಯನ್ನು ಕಾರ್ಯಸಂಸ್ಥೆಯು ನಿಯೋಜಿಸಿಕೊಂಡಿದೆ ಎಂದು ಅದಕ್ಕೆ ಮನದಟ್ಟಾದರೆ, ಆ ಕಾರ್ಯಸಂಸ್ಥೆಯನ್ನು ವಾರದಾದ್ಯಂತ ತೆರೆದಿರಲು ಅನುಮತಿಸಬಹುದು.

(3) ಕಾರ್ಯಸಂಸ್ಥೆಯಲ್ಲಿನ ಪ್ರತಿಯೊಬ್ಬ ನಿಯೋಜಿತನಿಗೆ ವಿಶ್ರಾಂತಿಗಾಗಿನ ರಜೆ ದಿವಸವಾಗಿ ವಾರದಲ್ಲಿ ಕನಿಷ್ಠಪಕ್ಷ ಒಂದು ಇಡೀ ದಿನವನ್ನು ಕೊಡತಕ್ಕದ್ದು:

ಪರಂತು, ವಾರದಲ್ಲಿ ಒಂದೂವರೆ ದಿವಸಗಳ ವಿಶ್ರಾಂತಿಯನ್ನು ಕೊಟ್ಟಿರುವಂಥ ಕಾರ್ಯಸಂಸ್ಥೆಗಳಲ್ಲಿ ವಿಶ್ರಾಂತಿಯ ಅಂಥ ಅವಧಿಯನ್ನು ಮುಂದುವರಿಸತಕ್ಕದ್ದು.

(4) ಉಪ-ಪ್ರಕರಣ (3)ರ ಮೇರೆಗೆ ನಿಯೋಜಿತನಿಗೆ ಕೊಟ್ಟ ವಾರದ ರಜಾ ದಿವಸದಂದು ಅಥವಾ ಅಂಥ ಕಾರ್ಯಸಂಸ್ಥೆಯು ಮುಚ್ಚಿರುವಂಥ ದಿವಸದಂದು ಅವನ ಕಾರ್ಯಸಂಸ್ಥೆಯ ಕಾರ್ಯ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಕೆಲಸಕ್ಕಾಗಿ ನಿಯೋಜಕನು, ನಿಯೋಜಿತನನ್ನು ಅವನ ಕಾರ್ಯಸಂಸ್ಥೆಗೆ ಕರೆಯುವುದು ಅಥವಾ ಇತರ ಯಾವುದೇ ಸ್ಥಳದಲ್ಲಿ ನಿಯೋಜಿತನು ಅಲ್ಲಿಗೆ ಹೋಗುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

(5) ಉಪ-ಪ್ರಕರಣ (3)ರ ಮೇರೆಗೆ ನಿಯೋಜಿತನಿಗೆ ಕೊಟ್ಟ ರಜಾ ದಿನಕ್ಕಾಗಿ ಯಾವುದೇ ಕಾರ್ಯಸಂಸ್ಥೆಯಲ್ಲಿ ಅವನ ಮಜೂರಿಗಳಿಂದ ಯಾವುದೇ ಕಳೆತವನ್ನು ಮಾಡತಕ್ಕದ್ದಲ್ಲ. ಯಾರೇ ನಿಯೋಜಿತನನ್ನು ದೈನಂದಿನ ಮಜೂರಿಗಳ ಮೇಲೆ ಯೋಜಿಸಿಕೊಂಡಿದ್ದರೂ, ವಾರದ ರಜಾ ದಿವಸಕ್ಕಾಗಿ ಅವನ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

1. 1997 ರ ಅಧಿನಿಯಮ 25 ರ ಮೂಲಕ 12.2.1998 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**13. ಮುಚ್ಚುವ ವೇಳೆಗಳ ತರುವಾಯ ಕಾರ್ಯಸಂಸ್ಥೆಗಳ ಹೊರಗಡೆ ಮಾರಾಟ ನಿಷೇಧ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿರುವಂತೆ ಹೊರತು, ಯಾರೇ ವ್ಯಕ್ತಿಯು ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಅಥವಾ ಅದರ ಪಕ್ಕದಲ್ಲಿ, ಅಂಥ ಬೀದಿ ಅಥವಾ ಸಾರ್ವಜನಿಕ ಸ್ಥಳವು ಇರುವಂಥ ಸ್ಥಳದಲ್ಲಿ ಅದೇ ವರ್ಗದ ಸರಕುಗಳಲ್ಲಿ ವ್ಯವಹರಿಸುವ ಕಾರ್ಯಸಂಸ್ಥೆಗಳನ್ನು ಮುಚ್ಚುವುದಕ್ಕಾಗಿ 11ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ವೇಳೆಯ ತರುವಾಯ ಯಾವುದೇ ಸರಕುಗಳ ಮಾರಾಟವನ್ನು ನಡೆಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ವೃತ್ತಪತ್ರಿಕೆಗಳ ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ವಿನಾಯಿತಿಗೊಳಿಸಬಹುದಾದಂಥ ಇತರ ವಸ್ತುಗಳ ಮಾರಾಟಕ್ಕೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ IV
## ಮಜೂರಿ ಸಹಿತ ವಾರ್ಷಿಕ ರಜೆ

**14. ಅಧ್ಯಾಯದ ಅನ್ವಯ.-** ಈ ಅಧ್ಯಾಯದ ಉಪಬಂಧಗಳು, ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಯಾವುದೇ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರಿನ ಮೇರೆಗೆ ನಿಯೋಜಿತನು ಪಡೆಯಲು ಹಕ್ಕುಳ್ಳವನಾಗಿರುವ ಯಾವುದೇ ಹಕ್ಕುಗಳಿಗೆ ಪ್ರತಿಕೂಲವಾಗಿ ಪ್ರವರ್ತಿಸತಕ್ಕದ್ದಲ್ಲ:

ಪರಂತು, ಅಂಥ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರು ಈ ಅಧ್ಯಾಯದಲ್ಲಿ ಉಪಬಂಧಿಸಿರುವುದಕ್ಕಿಂತ ಮಜೂರಿ ಸಹಿತ ದೀರ್ಘ ರಜೆ ಅಥವಾ ವಾರದ ರಜಾ ದಿವಸಗಳಿಗಾಗಿ ಉಪಬಂಧಿಸಿರುವಲ್ಲಿ, ನಿಯೋಜಿತನು ಸಂದರ್ಭಾನುಸಾರ ಅಂಥ ದೀರ್ಘ ರಜೆ ಅಥವಾ ವಾರದ ರಜಾ ದಿವಸಗಳಿಗೆ ಮಾತ್ರ ಹಕ್ಕುಳ್ಳವನಾಗಿರತಕ್ಕದ್ದು.

**15. ಮಜೂರಿಗಳ ಸಹಿತ ವಾರ್ಷಿಕ ರಜೆ.-** [1][(1) ಕಾರ್ಯಸಂಸ್ಥೆಯಲ್ಲಿನ ಪ್ರತಿಯೊಬ್ಬ ನಿಯೋಜಿತನು, ಮಜೂರಿ ಸಹಿತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು

(i) ವಯಸ್ಕನಾಗಿದ್ದರೆ, ಅವನು ನೆರವೇರಿಸಿದ ಕೆಲಸದ ಪ್ರತಿ ಇಪ್ಪತ್ತು ದಿವಸಗಳಿಗೆ ಒಂದು ದಿವಸದ;

(ii) ಯುವ ವ್ಯಕ್ತಿಯಾಗಿದ್ದರೆ, ಅವನು ನೆರವೇರಿಸಿದ ಪ್ರತಿಯೊಂದು ಹದಿನೈದು ದಿವಸಗಳಿಗೆ ಒಂದು ದಿವಸದ

- ದರದಲ್ಲಿ ಲೆಕ್ಕ ಹಾಕಿ ಅಷ್ಟು ಸಂಖ್ಯೆಯ ದಿವಸಗಳಿಗೆ ಮಜೂರಿ ಸಹಿತ ರಜೆಗೆ ಅವಕಾಶಕೊಡತಕ್ಕದ್ದು.

**ವಿವರಣೆ:** ಈ ಉಪ-ಪ್ರಕರಣದ ಉದ್ದೇಶಕ್ಕಾಗಿ,-

(ಎ) ಒಪ್ಪಂದ ಅಥವಾ ಕರಾರಿನ ಮೂಲಕ ಸ್ಥಾಯೀ ಆದೇಶದ ಮೇರೆಗೆ ಅನುಮತಿಸಲಾದಂತೆ ಅಥವಾ ನಿಯೋಜಕನ ನಿಯಂತ್ರಣ ಮೀರಿದ ಇತರ ಯಾವುದೇ ಕಾರಣಗಳಿಗಾಗಿ ಹಂಗಾಮಿಯಾಗಿ ಕೆಲಸಗಾರರನ್ನು ವಜಾ ಮಾಡಿದ ಯಾವುದೇ ದಿವಸಗಳನ್ನು;

(ಬಿ) ನಿಯೋಜಿತಳ ಸಂದರ್ಭದಲ್ಲಿ, ಹನ್ನೆರಡು ವಾರಗಳಿಗೆ ಮೀರದಷ್ಟು ದಿವಸಗಳ ಹೆರಿಗೆ ರಜೆಯನ್ನು; ಮತ್ತು

(ಸಿ) ರಜೆಯನ್ನು ಬಳಸಿಕೊಂಡ ಅಂಥ ವರ್ಷದ ಹಿಂದಿನ ವರ್ಷದಲ್ಲಿ ಗಳಿಸಿದ ರಜೆಯನ್ನು

- ಪ್ರಕರಣದ ಮೇರೆಗೆ ರಜೆಯನ್ನು ಗಣನೆಗೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ನಿಯೋಜಿತನು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಿದ ದಿವಸಗಳೆಂದು ಭಾವಿಸತಕ್ಕದ್ದು, ಆದರೆ ಈ ದಿವಸಗಳಿಗಾಗಿ ನಿಯೋಜಿತನು ರಜೆಯನ್ನು ಗಳಿಸತಕ್ಕದ್ದಲ್ಲ.][1]

1. 1997 ರ ಅಧಿನಿಯಮ 25 ರ ಮೂಲಕ 12.2.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**[1][(2) x x x][1]**

1. 1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಪ್ರತಿಯೊಬ್ಬ ನಿಯೋಜಿತನು ಯಾವುದೇ ಕಾರ್ಯಸಂಸ್ಥೆಯಲ್ಲಿ ನಿರಂತರ ಸೇವೆಯ ಮೊದಲ ಹನ್ನೆರಡು ತಿಂಗಳಲ್ಲಿ ಮತ್ತು ಅಂಥ ಸೇವೆಯ ತರುವಾಯದ ಪ್ರತಿ ಹನ್ನೆರಡು ತಿಂಗಳಲ್ಲಿ ಗುರಿಯಾದ ಯಾವುದೇ ಕಾಯಿಲೆ ಅಥವಾ ಅವನಿಗುಂಟಾದ ಅಪಘಾತದ ಕಾರಣದ ಮೇಲೆ ಅಥವಾ ಇತರ ಯಾವುದೇ ಯುಕ್ತ ಕಾರಣಕ್ಕಾಗಿ ಹನ್ನೆರಡು ದಿವಸಗಳಿಗೆ ಮೀರದ ಅವಧಿಗಾಗಿ ಮಜೂರಿ ಸಹಿತ ರಜೆಗೆ ಸಹ ಹಕ್ಕುಳ್ಳವನಾಗಿರತಕ್ಕದ್ದು.

(4) ಯಾರೇ ನಿಯೋಜಿತನನ್ನು, ವರ್ಷದ ಅವಧಿಯಲ್ಲಿ ಸೇವೆಯಿಂದ ಬಿಡುಗಡೆ ಮಾಡಿದ್ದರೆ ಅಥವಾ ವಜಾ ಮಾಡಿದ್ದರೆ ರಜೆಯನ್ನು ಗಳಿಸಲು ಅವನನ್ನು ಹಕ್ಕುಳ್ಳವನನ್ನಾಗಿಸುವ (1)ನೇ ಉಪ-ಪ್ರಕರಣದಲ್ಲಿ [1][x x x][1] ನಿರ್ದಿಷ್ಟಪಡಿಸಿದ ಇಡೀ ಅವಧಿಯವರೆಗೆ, ಅವನು ಕೆಲಸ ಮಾಡಿರದಿದ್ದರೆ ಅವನು (1)ನೇ ಉಪ-ಪ್ರಕರಣದಲ್ಲಿ ಹೇಳಲಾದ ದರದ ಮಜೂರಿ ಸಹಿತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

1. 1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(5) ಉಪ-ಪ್ರಕರಣ (3)ರ ಮೇರೆಗೆ ಯಾವುದೇ ರಜೆಗೆ ಹಕ್ಕುಳ್ಳವನಾಗಿರುವ ನಿಯೋಜಿತನನ್ನು, ಅವನು ಅಪಘಾತದ ಪರಿಣಾಮದಿಂದಾಗಿ ಕಾಯಿಲೆ ಅಥವಾ ನೋವಿನಿಂದ ನರಳುತ್ತಿರುವಾಗ ಸೇವೆಯಿಂದ ಬಿಡುಗಡೆ ಮಾಡಿದ್ದರೆ, ಅಥವಾ ವಜಾ ಮಾಡಿದ್ದರೆ, ನಿಯೋಜಕನು (4)ನೇ ಉಪ-ಪ್ರಕರಣದ ಮೇರೆಗೆ ನಿಯೋಜಿತನಿಗೆ ಸಂದಾಯ ಮಾಡಬೇಕಾದ ಮೊಬಲಗು ಯಾವುದಾದರೂ ಇದ್ದರೆ, ಅದರ ಜೊತೆಗೆ ಅವನನ್ನು ಸೇವೆಯಿಂದ ಬಿಡುಗಡೆ ಮಾಡಿದ್ದ ಅಥವಾ ವಜಾ ಮಾಡಿದ್ದ ಕಾಲದಲ್ಲಿ, ಯಾವ ಅವಧಿಗೆ ಸಂಬಂಧಿಸಿದಂತೆ ಅವನು ರಜೆಗೆ ಹಕ್ಕುಳ್ಳವನಾಗಿದ್ದನೋ ಅದಕ್ಕೆ ಸಂಬಂಧಿಸಿದಂತೆ, ಅವನಿಗೆ ಈ ಅಧಿನಿಯಮದ ಮೇರೆಗೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(6) ಈ ಪ್ರಕರಣದ ಮೇರೆಗೆ ರಜೆಯನ್ನು ಲೆಕ್ಕಹಾಕುವಲ್ಲಿ, ಅರ್ಧ ದಿವಸದ ಅಥವಾ ಅದಕ್ಕಿಂತ ಹೆಚ್ಚಿನ ರಜೆಯ ಭಾಗವನ್ನು, ಒಂದು ಪೂರ್ಣ ದಿವಸ ರಜೆ ಎಂದು ಪರಿಗಣಿಸತಕ್ಕದ್ದು ಮತ್ತು ಅರ್ಧ ದಿನಕ್ಕಿಂತ ಕಡಿಮೆ ಭಾಗವನ್ನು ಬಿಟ್ಟುಬಿಡತಕ್ಕದ್ದು.

(7) ನಿಯೋಜಿತನು ಸಂದರ್ಭಾನುಸಾರ (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಅವಕಾಶವಿರುವ ಇಡೀ ರಜೆಯನ್ನು ಯಾವುದೇ ಒಂದು ಕ್ಯಾಲೆಂಡರ್

ವರ್ಷದಲ್ಲಿ ತೆಗೆದುಕೊಳ್ಳದಿದ್ದರೆ, ಅವನು ತೆಗೆದುಕೊಂಡಿರುವ ಯಾವುದೇ ರಜೆಯನ್ನು ಮುಂದೆ ಬರುವ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಕೊಡಬೇಕಾದ ರಜೆಗೆ ಸೇರಿಸತಕ್ಕದ್ದು:

[1][ಪರಂತು, ಮುಂದೆ ಬರುವ ವರ್ಷಕ್ಕೆ ಉಳಿಸಿಕೊಂಡು ಹೋಗಬಹುದಾದ ರಜಾ ದಿನಗಳ ಒಟ್ಟು ಸಂಖ್ಯೆಯು ನಲವತ್ತೈದು ದಿವಸಗಳನ್ನು ಮೀರತಕ್ಕದ್ದಲ್ಲ:][1]

1. 2021ರ ಅಧಿನಿಯಮ 08ರ ಮೂಲಕ 19.2.2021 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮತ್ತೂ ಪರಂತು, ನಿಯೋಜಿತನು, ಮಜೂರಿಗಳ ಸಹಿತ ರಜೆಗಾಗಿ ಅರ್ಜಿ ಸಲ್ಲಿಸಿದ್ದು, ಆದರೆ (10)ನೇ ಮತ್ತು (11)ನೇ ಉಪ-ಪ್ರಕರಣಗಳಲ್ಲಿ ಹೇಳಲಾದ ಯಾವುದೇ ಯೋಜನೆಗೆ ಅನುಸಾರವಾಗಿ ಅಂಥ ರಜೆಯನ್ನು ಕೊಟ್ಟಿಲ್ಲದೇ ಇರುವಲ್ಲಿ, ಆ ನಿಯೋಜಿತನು ಉಪಯೋಗಿಸಿಕೊಂಡಿಲ್ಲದ ಆ ರಜೆಯನ್ನು ಯಾವುದೇ ಪರಿಮಿತಿ ಇಲ್ಲದೆ ಉಳಿಸಿಕೊಂಡು ಹೋಗಲು ಹಕ್ಕುಳ್ಳವನಾಗಿರತಕ್ಕದ್ದು.

(8) ನಿಯೋಜಿತನು ಕಾರ್ಯಸಂಸ್ಥೆಯ ವ್ಯವಸ್ಥಾಪಕನಿಗೆ ಲಿಖಿತದಲ್ಲಿ ಯಾವುದೇ ಕಾಲದಲ್ಲಿ ತನ್ನ ರಜೆಯು ಯಾವ ದಿನಾಂಕದಿಂದ ಪ್ರಾರಂಭವಾಗಬೇಕೆಂದು ಅವನು ಇಚ್ಛಿಸುವನೋ ಆ ದಿನಾಂಕಕ್ಕೆ ಮುಂಚೆ ಹತ್ತು ದಿವಸಗಳಿಗೆ ಕಡಿಮೆ ಇರದಂತೆ, ಆ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಕೊಡಬೇಕಾಗಬಹುದಾದ ಎಲ್ಲ ರಜೆಯನ್ನು ಅಥವಾ ಅದರ ಯಾವುದೇ ಭಾಗವನ್ನು ತೆಗೆದುಕೊಳ್ಳಲು ಲಿಖಿತದಲ್ಲಿ ಅರ್ಜಿ ಸಲ್ಲಿಸಬಹುದು:

ಪರಂತು, ಯಾವುದೇ ವರ್ಷಾವಧಿಯಲ್ಲಿ ಎಷ್ಟು ಸಲ ತೆಗೆದುಕೊಳ್ಳಬಹುದೋ ಆ ಸಂಖ್ಯೆಯು, ಮೂರನ್ನು ಅಥವಾ ನಿಯೋಜಕ ಮತ್ತು ನಿಯೋಜಿತನ ನಡುವೆ ಒಪ್ಪಂದ ಮಾಡಿಕೊಂಡಿರಬಹುದಾದಂಥ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(9) ಯಾರೇ ನಿಯೋಜಿತನು, (3)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಬರಬೇಕಾಗಿರುವ ಮಜೂರಿ ಸಹಿತ ರಜೆಯನ್ನು ಬಳಸಿಕೊಳ್ಳಲು ಇಚ್ಛಿಸಿದರೆ, (8)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ರಜೆಗೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸದೇ ಇದ್ದರೂ ಕೂಡ, ಅವನಿಗೆ ಅಂಥ ರಜೆಯನ್ನು ನೀಡತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ 17ನೇ ಪ್ರಕರಣದ ಮೇರೆಗೆ ಕೊಡಬಹುದಾದ ಮಜೂರಿಗಳನ್ನು ಯಾವ ದಿನಾಂಕದಂದು ರಜೆಯು ಪ್ರಾರಂಭವಾಗುವುದೋ ಆ ದಿನಾಂಕದಿಂದ ಹದಿನೈದು ದಿವಸಗಳನ್ನು ಮೀರದ ದಿನಾಂಕದೊಳಗೆ ಸಂದಾಯ ಮಾಡತಕ್ಕದ್ದು.

(10) ಕಾರ್ಯಸಂಸ್ಥೆಯಲ್ಲಿ ಕೆಲಸದ ಮುಂದುವರಿಕೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ನಿಯೋಜಕನು, ನಿಯಮಿಸಿದ ರೀತಿಯಲ್ಲಿ ಆಯ್ಕೆಮಾಡಿಕೊಂಡ ಕಾರ್ಯಸಂಸ್ಥೆಯಲ್ಲಿನ ನಿಯೋಜಿತ ಪ್ರತಿನಿಧಿಗಳೊಂದಿಗೆ, ಒಪ್ಪಂದ ಮಾಡಿಕೊಂಡು, ಬರಹದಲ್ಲಿ ಯೋಜನೆಯನ್ನು ರೂಪಿಸಬಹುದು. ಅದರ ಮೂಲಕ ಈ ಪ್ರಕರಣದ ಮೇರೆಗೆ ಅನುಮತಿಸಬಹುದಾದ ರಜೆಯ ಮಂಜೂರಾತಿಯನ್ನು ವಿನಿಯಮಿಸಬಹುದು.

(11) ಉಪ-ಪ್ರಕರಣ (10)ರ ಮೇರೆಗೆ ರೂಪಿಸಿದ ಯೋಜನೆಯನ್ನು ಕಾರ್ಯಸಂಸ್ಥೆಯ ಆವರಣದಲ್ಲಿನ ಅನುಕೂಲಕರವಾದ ಸ್ಥಳಗಳಲ್ಲಿ ಅಂಟಿಸತಕ್ಕದ್ದು ಮತ್ತು ಅದು ಜಾರಿಗೆ ಬಂದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು ಮತ್ತು ಆ ತರುವಾಯ ನಿಯೋಜಕನು, (10)ನೇ ಉಪ-ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ನಿಯೋಜಿತರ ಪ್ರತಿನಿಧಿಗಳ ಒಪ್ಪಿಗೆಯಿಂದ ಒಂದು ಸಲಕ್ಕೆ ಹನ್ನೆರಡು ತಿಂಗಳುಗಳ ಇನ್ನೂ ಹೆಚ್ಚಿನ ಅವಧಿಗಾಗಿ, ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಡಿಲ್ಲದೇ ನವೀಕರಿಸಬಹುದು.

(12) ರಜೆಯ ನಿರಾಕರಣೆಯು ಉಪ-ಪ್ರಕರಣ (10) ಮತ್ತು (11)ರ ಮೇರೆಗೆ ತತ್ಕಾಲದಲ್ಲಿ ಪ್ರವರ್ತನೆಯಲ್ಲಿರುವ ಯೋಜನೆಗೆ ಅನುಸಾರವಾಗಿದ್ದ ಹೊರತು (8)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸದೇ ಇರುವ ರಜೆ ಅರ್ಜಿಯನ್ನು ನಿರಾಕರಿಸತಕ್ಕದ್ದಲ್ಲ.

(13) ಸಂದರ್ಭಾನುಸಾರ (1)ನೇ ಉಪ-ಪ್ರಕರಣದ [1][x x x][1] ಮೇರೆಗೆ ರಜೆಗೆ ಹಕ್ಕುಳ್ಳವನಾಗಿರುವ ನಿಯೋಜಿತನ ನಿಯೋಜನೆಯನ್ನು, ಅವನು ಹಕ್ಕುಳ್ಳವನಾಗಿರುವ ಇಡೀ ರಜೆಯನ್ನು ಅವನು ತೆಗೆದುಕೊಳ್ಳುವುದಕ್ಕೆ ಮುಂಚೆ ನಿಯೋಜಕನು ಕೊನೆಗೊಳಿಸಿದ್ದರೆ ಅಥವಾ ಅಂಥ ರಜೆಗಾಗಿ ಅರ್ಜಿಯನ್ನು ಹಾಕಿಕೊಂಡಿದ್ದು ಮತ್ತು ಅದನ್ನು ಮಂಜೂರು ಮಾಡಿರದಿದ್ದರೆ, ಅವನು ರಜೆಯನ್ನು

ಪಡೆಯುವುದಕ್ಕೆ ಮುಂಚೆ ನಿಯೋಜಿತನು ಅವನ ನಿಯೋಜನೆಯನ್ನು ಬಿಟ್ಟುಹೋದರೆ, ತೆಗೆದುಕೊಳ್ಳದೇ ಇರುವ ರಜೆಗೆ ಸಂಬಂಧಿಸಿದಂತೆ 16ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗುಗಳನ್ನು ನಿಯೋಜಕನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವನ್ನು ನಿಯೋಜಕನು ನಿಯೋಜಿತನ ನಿಯೋಜನೆಯನ್ನು ಕೊನೆಗೊಳಿಸಿರುವಲ್ಲಿ ಅಂಥ ಕೊನೆಗೊಳಿಸುವಿಕೆಯ ತರುವಾಯ ಎರಡನೇ ಕೆಲಸದ ದಿವಸವು ಮುಕ್ತಾಯವಾಗುವುದಕ್ಕೆ ಮುಂಚೆ ಮತ್ತು ನಿಯೋಜಿತನು ಅವನ ನಿಯೋಜನೆಯನ್ನು ಬಿಟ್ಟುಹೋಗಿರುವಲ್ಲಿ ಮುಂದಿನ ವೇತನ ದಿವಸದಂದು ಅಥವಾ ಅದಕ್ಕೆ ಮುಂಚೆ ಸಂದಾಯ ಮಾಡತಕ್ಕದ್ದು.

(14) ನಿಯೋಜಿತನು ತೆಗೆದುಕೊಳ್ಳದೇ ಇರುವ ರಜೆಯನ್ನು, ಸೇವೆಯಿಂದ ಬಿಡುಗಡೆ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಮುಂಚೆ ಕೊಡಲು ಅಗತ್ಯಪಡಿಸಿದ ಯಾವುದೇ ನೋಟೀಸಿನ ಅವಧಿಯನ್ನು ಲೆಕ್ಕ ಹಾಕುವಲ್ಲಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

1. 1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**16. ರಜಾ ಅವಧಿಯಲ್ಲಿ ಮಜೂರಿಗಳು.**- (1) ಪ್ರಕರಣ 15ರ ಮೇರೆಗೆ ನಿಯೋಜಿತನಿಗೆ ಅನುಮತಿಸಬಹುದಾದ ರಜೆಗಾಗಿ, ಯಾವುದೇ ಅಧಿಕಕಾಲಿಕ ಮಜೂರಿಯನ್ನು ಮತ್ತು ಬೋನಸ್‌ನ್ನು ಹೊರತುಪಡಿಸಿ, ಆದರೆ ತುಟ್ಟಿಭತ್ಯೆ ಮತ್ತು ನಿಯೋಜಿತನಿಗೆ ಆಹಾರಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ರಿಯಾಯಿತಿ ಮಾರಾಟದ ಮೂಲಕ ಒದಗಿಬರುವ ಅನುಕೂಲತೆಗೆ ಸಮನಾದ ನಗದು ಒಳಗೊಂಡಂತೆ, ಅವನ ರಜೆಯ ನಿಕಟಪೂರ್ವದ ತಿಂಗಳಿನಲ್ಲಿ ಅವನು ಕೆಲಸ ಮಾಡಿದ ದಿವಸಗಳಿಗಾಗಿನ ಅವನ ಒಟ್ಟು ಪೂರ್ಣ ಕಾಲಾವಧಿ ಗಳಿಕೆಗಳ ದೈನಂದಿನ ಸರಾಸರಿಗೆ ಸಮನಾದ ದರದಲ್ಲಿ ಸಂದಾಯ ಮಾಡತಕ್ಕದ್ದು.

(2) ಆಹಾರಧಾನ್ಯಗಳು ಮತ್ತು ಇತರ ವಸ್ತುಗಳನ್ನು ನಿಯೋಜಿತನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಬಂದ ಅನುಕೂಲತೆಗೆ ಸಮಾನವಾದ ನಗದನ್ನು, ನಿಗದಿತ ಕುಟುಂಬಕ್ಕೆ ಕೊಡಬಹುದಾದ ಆಹಾರಧಾನ್ಯ ಮತ್ತು ಇತರೆ ವಸ್ತುಗಳ ಗರಿಷ್ಠ ಪ್ರಮಾಣದ ಆಧಾರದ ಮೇಲೆ ನಿಯಮಿಸಬಹುದಾದಷ್ಟು ಲೆಕ್ಕ ಹಾಕತಕ್ಕದ್ದು.

**ವಿವರಣೆ.**- 8ನೇ ಪ್ರಕರಣದ (3)ನೇ ಉಪ-ಪ್ರಕರಣದ ವಿವರಣೆಗಳು ಈ ಉಪ-ಪ್ರಕರಣದ ಮೇರೆಗೆ ನಿಗದಿತ ಕುಟುಂಬವನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ಅನ್ವಯವಾಗತಕ್ಕದ್ದು.

**17. ಕೆಲವು ಸಂದರ್ಭಗಳಲ್ಲಿ ಮುಂಗಡ ಸಂದಾಯ.-** ವಯಸ್ಕನ ಸಂದರ್ಭದಲ್ಲಿ ಯಾರಿಗೆ ನಾಲ್ಕು ದಿವಸಗಳಿಗೆ ಕಡಿಮೆ ಇಲ್ಲದಷ್ಟು ಮತ್ತು ಯುವ ವ್ಯಕ್ತಿಯ ಸಂದರ್ಭದಲ್ಲಿ ಐದು ದಿವಸಗಳಿಗೆ ಕಡಿಮೆ ಇಲ್ಲದಷ್ಟು, ರಜೆಯನ್ನು ಕೊಡಲಾಗಿದೆಯೋ ಆ ನಿಯೋಜಿತನಿಗೆ, ಅವನ ರಜೆಯು ಪ್ರಾರಂಭವಾಗುವುದಕ್ಕೆ ಮುಂಚೆ ಕೊಡಲಾದ ರಜಾ ಅವಧಿಗಾಗಿ ಬರಬೇಕಾದ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

**18. ಸಂದಾಯ ಮಾಡದಿರುವ ಮಜೂರಿಗಳ ವಸೂಲಿಯ ವಿಧಾನ.-** ಈ ಅಧ್ಯಾಯದ ಮೇರೆಗೆ ನಿಯೋಜಕನು, ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ, ಆದರೆ ಅವನು ಸಂದಾಯ ಮಾಡಿಲ್ಲದ ಯಾವುದೇ ಮೊತ್ತವನ್ನು, ಮಜೂರಿಗಳ ಸಂದಾಯ ಅಧಿನಿಯಮ, 1936 (ಕೇಂದ್ರ ಅಧಿನಿಯಮ 1936ರ IV)ರ ಉಪಬಂಧಗಳ ಮೇರೆಗೆ ವಿಳಂಬಿತ ಮಜೂರಿಗಳಂತೆ ವಸೂಲು ಮಾಡತಕ್ಕದ್ದು.

**19. ನಿಯಮಗಳ ರಚನಾಧಿಕಾರ.-** ರಾಜ್ಯ ಸರ್ಕಾರವು ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಿಸಬಹುದಾದಂಥ ವಿವರಗಳನ್ನೊಳಗೊಂಡ ರಿಜಿಸ್ಟರುಗಳನ್ನು

ಇಡಲು ಮತ್ತು ಪರಿಶೀಲಕರು ಪರೀಕ್ಷಿಸುವಂತೆ ಅವು ಲಭ್ಯವಾಗುವಂತೆ ಅಗತ್ಯಪಡಿಸಿ, ನಿಯಮಗಳನ್ನು ರಚಿಸಬಹುದು.

**20. ಕಾರ್ಯಸಂಸ್ಥೆಗಳನ್ನು ವಿನಾಯಿತಿಗೊಳಿಸಲು ಅಧಿಕಾರ.-** ಕಾರ್ಯಸಂಸ್ಥೆಯಲ್ಲಿನ ನಿಯೋಜಿತರಿಗೆ ಅನ್ವಯವಾಗಬಹುದಾದ ರಜಾ ನಿಯಮಗಳು, ಈ ಅಧ್ಯಾಯದಲ್ಲಿ ಉಪಬಂಧಿಸಲಾಗಿರುವ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಪ್ರಯೋಜನಗಳಿಗಿಂತ ಕಡಿಮೆ ಅನೂಕೂಲಕರವಾಗಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಧಿಸೂಚನೆಯ ಮೂಲಕ ಆ ಕಾರ್ಯಸಂಸ್ಥೆಯನ್ನು ಈ ಅಧ್ಯಾಯದ ಎಲ್ಲ ಅಥವಾ ಯಾವುದೇ ಉಪಬಂಧಧಿಂದ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ವಿನಾಯಿತಿಗೊಳಿಸಬಹುದು.

## ಅಧ್ಯಾಯ V

## [1][ಮಜೂರಿಗಳು ಮತ್ತು ನಷ್ಟಪರಿಹಾರ][1]

1. 1969ರ ಅಧಿನಿಯಮ 4 ರ ಮೂಲಕ 16.5.1969ರಿಂದ ಜಾರಿಗೆಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

**21. ಮಜೂರಿಗಳ ಸಂದಾಯ ಅಧಿನಿಯಮದ ಅನ್ವಯ.-** (1) ಮಜೂರಿಗಳ ಸಂದಾಯ ಅಧಿನಿಯಮ, 1936 (ಕೇಂದ್ರ ಅಧಿನಿಯಮ 1936 ರ IV) ರಲ್ಲಿ (ಈ ಪ್ರಕರಣದಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸದರಿ ಅಧಿನಿಯಮವು ಅಥವಾ ಅದರ ಯಾವುದೇ ಉಪಬಂಧವು, ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸುವ ದಿನಾಂಕದಂದು ಜಾರಿಯಲ್ಲಿದ್ದಂತೆ ಈ ಅಧಿನಿಯಮವು ಅನ್ವಯವಾಗುವಂಥ ಕಾರ್ಯಸಂಸ್ಥೆಗಳಲ್ಲಿನ ನಿಯೋಜಿತರೆಲ್ಲರಿಗೂ ಅಥವಾ ಅವರ ಯಾವುದೇ ವರ್ಗಕ್ಕೆ ಮತ್ತು ಅವರ ನಿಯೋಜಕರಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಸದರಿ ಅಧಿನಿಯಮವು ಅಥವಾ ಅದರ ಉಪಬಂಧಗಳು ನಿಯೋಜಕರಿಗೆ ಮತ್ತು ನಿಯೋಜಿತರಿಗೆ ಈ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಹೇಗೆ ಅನ್ವಯವಾಗತಕ್ಕದ್ದೋ ಹಾಗೆ ಅನ್ವಯವಾಗತಕ್ಕದ್ದು.

(2) ಸದರಿ ಅಧಿನಿಯಮದ ಉಪಬಂಧಗಳನ್ನು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಕಾರ್ಯಸಂಸ್ಥೆಗೆ ಅನ್ವಯ ಮಾಡಿದ ಮೇಲೆ, ಈ ಅಧಿನಿಯಮದ ಮೇರೆಗೆ ನೇಮಕ ಮಾಡಿದ ಪರಿಶೀಲಕನನ್ನು ಅವನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಸದರಿ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಪರಿಶೀಲಕನೆಂಬುದಾಗಿ ಭಾವಿಸತಕ್ಕದ್ದು.

**22. ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ ಅನ್ವಯ.-** ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸಿದ ದಿನಾಂಕದಂದು ಜಾರಿಯಲ್ಲಿದ್ದಂತೆ ಕಾರ್ಮಿಕ ನಷ್ಟಪರಿಹಾರ ಅಧಿನಿಯಮ, 1923 (ಕೇಂದ್ರ ಅಧಿನಿಯಮ 1923 ರ VIII) ರ ಉಪಬಂಧಗಳು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯ ಸರ್ಕಾರವು ಅದರ ಮೇರೆಗೆ ರಚಿಸಿದ ನಿಯಮಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನಿಯೋಜಿತರಿಗೆ ಮತ್ತು ನಿಯೋಜಕರಿಗೆ ಅನ್ವಯವಾಗತಕ್ಕದ್ದು.

**[1][23. x x x][1]**

1. 1969 ರ ಅಧಿನಿಯಮ 4 ರ ಮೂಲಕ 16.5.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

## ಅಧ್ಯಾಯ VI
## ಮಕ್ಕಳ ಮತ್ತು ಮಹಿಳೆಯರ ನಿಯೋಜನೆ

**24. ಮಕ್ಕಳ ನಿಯೋಜನೆಯ ನಿಷೇಧ.-** ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಮಗುವನ್ನು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

[1][**25. ರಾತ್ರಿ ವೇಳೆಯಲ್ಲಿ ಮಹಿಳೆಯರ ನಿಯೋಜನೆಯ ನಿಯಂತ್ರಣ.-** (1) ರಾತ್ರಿ ವೇಳೆಯಲ್ಲಿ ಕೆಲಸ ಮಾಡಲು ಇಚ್ಛಿಸುವ ಮಹಿಳಾ ನಿಯೋಜಿತರಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ರಾತ್ರಿ ವೇಳೆಯಲ್ಲಿ ಅಂಗಡಿ ಅಥವಾ ವಾಣಿಜ್ಯ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅನುಮತಿ ನೀಡಬಹುದು, ಎಂದರೆ:-

(ಎ) ಅಧಿನಿಯಮದ 7, 8, 9, 10 ಮತ್ತು 12ನೇ ಪ್ರಕರಣಗಳ ಮೇರೆಗೆ ಗೊತ್ತುಪಡಿಸಿದ ನಿಯಂತ್ರಣವು, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ನಿಯೋಜಿತರಿಗೆ ಅನ್ವಯವಾಗುವುದು ಮುಂದುವರೆಯತಕ್ಕದ್ದು;

(ಬಿ) ಮಹಿಳಾ ನಿಯೋಜಿತರ ಸಮ್ಮತಿಯನ್ನು ಲಿಖಿತದಲ್ಲಿ ಪಡೆದುಕೊಳ್ಳತಕ್ಕದ್ದು;

(ಸಿ) ಕಾರ್ಯಸಂಸ್ಥೆಯು ಮಹಿಳಾ ನಿಯೋಜಿತಳಿಗೆ, ಆಕೆಯ ನಿವಾಸದಿಂದ ಕಾರ್ಯಸ್ಥಳಕ್ಕೆ ಹೋಗಲು ಮತ್ತು ಹಿಂದಿರುಗಿ ಬರಲು ಸಾರಿಗೆ ಸೌಲಭ್ಯಗಳನ್ನು ಉಚಿತವಾಗಿ ಮತ್ತು ಸಾಕಷ್ಟು ಭದ್ರತೆಯೊಂದಿಗೆ ಒದಗಿಸತಕ್ಕದ್ದು. ಅಂಥ ಸಾರಿಗೆ ಸೌಲಭ್ಯವು ಮಾರ್ಗಪತ್ತೆ (Tracking) ಮಾಡಲು ಮತ್ತು ಮೇಲ್ವಿಚಾರಣೆಗಾಗಿ ಜಾಗತಿಕ ಸ್ಥಳ ಮಾಹಿತಿ ಸೌಲಭ್ಯ(GPS)ವನ್ನು ಹೊಂದಿರತಕ್ಕದ್ದು;

(ಡಿ) ಮಹಿಳಾ ನಿಯೋಜಿತರ ನಿಯೋಜನೆಯು ಸರದಿಯ ಆಧಾರದಲ್ಲಿ ಇರತಕ್ಕದ್ದು;

(ಇ) ಸಾಕಷ್ಟು ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ರಾತ್ರಿ ಪಾಳಿಯ ವೇಳೆಯಲ್ಲಿ ನಿಯೋಜಿಸತಕ್ಕದ್ದು;

(ಎಫ್) ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವಂತೆ, ಮಹಿಳಾ ನಿಯೋಜಿತರುಗಳಿಗೆ ಅಗತ್ಯವಾದ ಸೂಕ್ತ ವಿಶ್ರಾಂತಿ ಕೊಠಡಿಗಳು, ವಿದ್ಯುತ್, ಶೌಚಾಲಯಗಳು, ಲಾಕರ್‌ಗಳು, ಔಷಧಾಲಯ ಸೌಲಭ್ಯ ಮತ್ತು ಸಾಕಷ್ಟು ನೀರು ಪೂರೈಕೆ ಇರುವ ಸ್ವಚ್ಛತಾ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಒದಗಿಸತಕ್ಕದ್ದು;

(ಜಿ) ಕಾರ್ಯಸಂಸ್ಥೆಯು, ಸ್ವಯಂ ಸೇವಾ ಸಂಸ್ಥೆಗಳಿಂದ ಅಥವಾ ಇತರೆ ಸಂಸ್ಥೆಗಳಿಂದ ಮಹಿಳಾ ನಿಯೋಜಿತರು ಪಡೆದುಕೊಂಡು ಶಿಶುಪಾಲನಾ ಗೃಹದ ವೆಚ್ಚವನ್ನು ಭರಿಸತಕ್ಕದ್ದು;

(ಎಚ್) ಕಾರ್ಯಸಂಸ್ಥೆಯು, ಪ್ರತಿಯೊಬ್ಬ ಚಾಲಕನ ಸ್ವವಿವರಗಳನ್ನು ಪಡೆದುಕೊಳ್ಳತಕ್ಕದ್ದು ಮತ್ತು ತಾವೇ ಸ್ವತಃ ನಿಯೋಜಿಸಿಕೊಂಡ ಎಲ್ಲಾ ಚಾಲಕರ ಪೂರ್ವೋತ್ತರಗಳನ್ನು ನಿಯೋಜನಾ-ಪೂರ್ವದಲ್ಲಿ ಪರಾಮರ್ಶೆ ಮಾಡತಕ್ಕದ್ದು. ಹೊರಗುತ್ತಿಗೆಯ ಮೂಲಕ ನಿಯೋಜಿತರಾದ ಚಾಲಕರ ಕುರಿತು ಅವರ ಸ್ವವಿವರ ಸಂಗ್ರಹಣೆ ಮತ್ತು ಅವರ ಪೂರ್ವೋತ್ತರಗಳನ್ನು ಸೇವಾದಾತನು ನಿಯೋಜನಾ-ಪೂರ್ವದಲ್ಲಿ ಪರಾಮರ್ಶೆ ಮಾಡಿದ್ದಾನೆಂಬ ಬಗ್ಗೆ ಮನವರಿಕೆಯಾಗಿರುವುದನ್ನು ಕಂಪನಿಗೆ ಖಚಿತಪಡಿಸಿಕೊಳ್ಳತಕ್ಕದ್ದು;

(ಐ) ಮಹಿಳಾ ನಿಯೋಜಿತರನ್ನು, ವಾಹನದಲ್ಲಿ ಹತ್ತಿಸಿಕೊಳ್ಳುವ ಮತ್ತು ಇಳಿಸುವ ಮಾರ್ಗದ ವೇಳಾಪಟ್ಟಿಯನ್ನು ಕೇವಲ ಕಂಪನಿಯ ಮೇಲ್ವಿಚಾರಣಾ ಕಚೇರಿಯೇ ನಿರ್ಧರಿಸತಕ್ಕದ್ದು. ತುರ್ತು ಪರಿಸ್ಥಿತಿಗಳಲ್ಲಿ, ಚಾಲಕರ/ಮಾರ್ಗಗಳ/ಪಾಳಿಗಳ ಬದಲಾವಣೆಯನ್ನು, ಮೇಲ್ವಿಚಾರಣಾ ಅಧಿಕಾರಿಗಳಿಗೆ/ ನಿಯೋಜಿತರುಗಳಿಗೆ ಮೊದಲೇ ತಿಳಿಸಿದ್ದಲ್ಲಿ ಮಾತ್ರವೇ ಅನುಮತಿ ನೀಡತಕ್ಕದ್ದು;

(ಜೆ) ಮಹಿಳಾ ನಿಯೋಜಿತರ ದೂರವಾಣಿ ಸಂಖ್ಯೆ, ಅದರಲ್ಲೂ ನಿರ್ದಿಷ್ಟವಾಗಿ ಮೊಬೈಲ್ ನಂಬರ್, ಇ-ಮೇಲ್ ವಿಳಾಸ ಮತ್ತು ಮನೆ ವಿಳಾಸಗಳನ್ನು ಅನಧಿಕೃತ ವ್ಯಕ್ತಿಗಳಿಗೆ ಬಹಿರಂಗಪಡಿಸತಕ್ಕದ್ದಲ್ಲ;

(ಕೆ) ಯಾರೇ ಮಹಿಳಾ ನಿಯೋಜಿತರನ್ನು, ಮೊದಲು ಹತ್ತಿಸಿಕೊಳ್ಳದಂತೆ ಹಾಗೂ ಕೊನೆಯಲ್ಲಿ ಇಳಿಸದಂತೆ, ಎಚ್ಚರಿಕೆಯಿಂದ ಮಾರ್ಗಗಳನ್ನು ಆಯ್ಕೆ ಮಾಡತಕ್ಕದ್ದು;

(ಎಲ್) ಕಂಪನಿಯು, ಮಹಿಳಾ ನಿಯೋಜಿತರುಗಳು ರಾತ್ರಿ ಪಾಳಿ ವಾಹನಗಳಲ್ಲಿ ಹತ್ತಿಕೊಳ್ಳುವಾಗ ಅಥವಾ ಕೊನೆಗೆ ಇಳಿದುಕೊಳ್ಳುವಾಗ ಮತ್ತು ಕೆಲಸ ಮಾಡುವ ಸ್ಥಳದಲ್ಲಿ, ಭದ್ರತಾ ಸಿಬ್ಬಂದಿಯನ್ನು ಒದಗಿಸತಕ್ಕದ್ದು;

(ಎಮ್) ಕಂಪನಿಯು ಗೊತ್ತುಪಡಿಸಿದ ಮೇಲ್ವಿಚಾರಕರು ಅಥವಾ ಸೇವಾದಾತರು ಅನೇಕ ಮಾರ್ಗಗಳಲ್ಲಿ ಸಂಚರಿಸುವ ವಾಹನಗಳನ್ನು ಸಾಧ್ಯವಾದಷ್ಟುಮಟ್ಟಿಗೆ, ಯಾದೃಚ್ಛಿಕವಾಗಿ ಪರೀಕ್ಷಿಸತಕ್ಕದ್ದು;

(ಎನ್) ಕಾರ್ಯಸಂಸ್ಥೆಯಲ್ಲಿ, ವಾಹನಗಳ ಚಲನವಲನಗಳ ಮೇಲೆ ನಿಗಾ ಇಡಲು, ನಿಯಂತ್ರಣ ಕೊಠಡಿ/ಟ್ರಾವೆಲ್ ಡೆಸ್ಕ್ ಇರತಕ್ಕದ್ದು;

(ಒ) ಮಹಿಳಾ ನಿಯೋಜಿತರುಗಳು, ತುರ್ತು ಸಮಯದಲ್ಲಿ ಸಂಕೇತಗಳನ್ನು ಕೊಡುವ ಮೂಲಕ ಸಂಬಂಧಪಟ್ಟವರನ್ನು ಸಂಪರ್ಕಿಸಲು ಸಾಧ್ಯವಾಗುವಂತೆ ಮೊಬೈಲ್‌ನಲ್ಲಿನ ಆ್ಯಪ್ ಅನ್ನು, ಕಾರ್ಯಸಂಸ್ಥೆಯು ಅಭಿವೃದ್ಧಿಪಡಿಸಬಹುದು ಮತ್ತು ಅಳವಡಿಸಿಕೊಳ್ಳಬಹುದು; ಮತ್ತು

(ಪಿ) ನಿಯಮಿಸಬಹುದಾದ ಯಾವುದೇ ಇತರ ಷರತ್ತು.

(2) ಮೇಲಿನ ಷರತ್ತುಗಳನ್ನು ಪಾಲಿಸಲು ಯಾವುದೇ ಕಾರ್ಯಸಂಸ್ಥೆಯು ವಿಫಲವಾದರೆ, ಅದರ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸತಕ್ಕದ್ದು.][1]

1. 2020 ರ 40ನೇ ಅಧಿನಿಯಮದ ಮೂಲಕ ದಿನಾಂಕ:19.10.2020 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ VII
## ಜಾರಿ ಮತ್ತು ಪರಿಶೀಲನೆ

**26. ಪರಿಶೀಲಕರು.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಸೂಕ್ತವೆಂದು ಅದು ಭಾವಿಸುವಂಥ ವ್ಯಕ್ತಿಗಳನ್ನು ಅಥವಾ ಅಂತಹ ವರ್ಗದ ವ್ಯಕ್ತಿಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ, ಅನುಕ್ರಮವಾಗಿ ಅದು ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಪರಿಶೀಲಕರಾಗಿ ಮತ್ತು ಸಹಾಯಕ ಪರಿಶೀಲಕರಾಗಿ ನೇಮಕ ಮಾಡಬಹುದು.

[1][(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಸೂಕ್ತವೆಂದು ಅದು ಭಾವಿಸುವಂಥ ಸರ್ಕಾರಿ ಅಧಿಕಾರಿಗಳನ್ನು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಕ್ಕಾಗಿ ಅದು ಅನುಕ್ರಮವಾಗಿ ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಅಡಿಷನಲ್ ಪರಿಶೀಲಕರಾಗಿರಲು ನೇಮಕ ಮಾಡಬಹುದು.

1. 1969ರ ಅಧಿನಿಯಮ 4ರ ಮೂಲಕ 16.5.1969ರಿಂದ ಜಾರಿಗೆ ಬರುವಂತೆ (2) ರಿಂದ (4)ನೇ ಉಪ-ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ.

(3) ಯಾವುದೇ ಪ್ರದೇಶದಲ್ಲಿ ಒಬ್ಬನಿಗಿಂತ ಹೆಚ್ಚು ಪರಿಶೀಲಕರು ಇರುವಲ್ಲಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಂಥ ಪರಿಶೀಲಕರು ಅನುಕ್ರಮವಾಗಿ ಚಲಾಯಿಸತಕ್ಕಂಥ ಅಧಿಕಾರಗಳನ್ನು ಘೋಷಿಸಬಹುದು.

(4) [1][ಕರ್ನಾಟಕದಲ್ಲಿನ ಕಾರ್ಮಿಕ ಆಯುಕ್ತರು][1] ಇಡೀ [1][ಕರ್ನಾಟಕ ರಾಜ್ಯ][1]ಕ್ಕಾಗಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಮುಖ್ಯ ಪರಿಶೀಲಕನಾಗಿರತಕ್ಕದ್ದು.][1]

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973 ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**27. ಪರಿಶೀಲಕರ ಅಧಿಕಾರಗಳು ಮತ್ತು ಕರ್ತವ್ಯಗಳು.-** ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು ಪರಿಶೀಲಕನು ಅವನ ಅಧಿಕಾರವ್ಯಾಪ್ತಿಯ ಪ್ರದೇಶದೊಳಗೆ,-

(ಎ) ಎಲ್ಲಾ ಯುಕ್ತ ಕಾಲಗಳಲ್ಲಿ ಮತ್ತು ಅವನು ಸೂಕ್ತವೆಂದು ಭಾವಿಸುವಂತೆ ರಾಜ್ಯ ಸರ್ಕಾರದ ಸೇವೆಯಲ್ಲಿನ ವ್ಯಕ್ತಿಗಳಾಗಿರುವವರ ಅಂಥ ಸಹಾಯಕರೊಂದಿಗೆ

ಕಾರ್ಯಸಂಸ್ಥೆಯಾಗಿರುವ ಅಥವಾ ಅವನು ಹಾಗೆ ನಂಬಲು ಕಾರಣವಿರುವಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು;

(ಬಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವನು ಅವಶ್ಯವೆಂದು ಭಾವಿಸುವಂಥ ಆವರಣಗಳ ಮತ್ತು ಯಾವುದೇ ನಿಯಮಿಸಲಾದ ರಿಜಿಸ್ಟರುಗಳು, ದಾಖಲೆಗಳು ಮತ್ತು ನೋಟೀಸುಗಳ ಪರೀಕ್ಷೆಯನ್ನು ಮಾಡಬಹುದು ಮತ್ತು ಆ ಸ್ಥಳದಲ್ಲೇ ಅಥವಾ ಅನ್ಯಥಾ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು; ಮತ್ತು

(ಸಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಿರಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು, ಯಾರೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ತನ್ನನ್ನೇ ಅಪರಾಧದಲ್ಲಿ ಸಿಕ್ಕಿಸುವಂತಹ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಅಗತ್ಯಪಡಿಸತಕ್ಕದ್ದಲ್ಲ.

**28. ಪರಿಶೀಲಕರು ಲೋಕ ನೌಕರರಾಗಿರುತ್ತಾರೆ.-** 26ನೇ ಪ್ರಕರಣದ ಮೇರೆಗೆ ಪರಿಶೀಲಕರಾಗಿ ನೇಮಕಗೊಂಡ ಅಥವಾ ಘೋಷಿತನಾದ ಪ್ರತಿಯೊಬ್ಬ ವ್ಯಕ್ತಿಯನ್ನು, ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು.

**29. ಪರಿಶೀಲನೆಗಾಗಿ ನಿಯೋಜಕರು ರಿಜಿಸ್ಟರುಗಳು, ದಾಖಲೆಗಳು, ಇತ್ಯಾದಿಗಳನ್ನು ಹಾಜರುಪಡಿಸತಕ್ಕದ್ದು.-** ಪ್ರತಿಯೊಬ್ಬ ನಿಯೋಜಕನು, ಈ ಅಧಿನಿಯಮದ ಮೇರೆಗೆ ಮತ್ತು ಅದರ ಉದ್ದೇಶಗಳಿಗಾಗಿ ಇಡಲು ಅಗತ್ಯಪಡಿಸಿದ ಎಲ್ಲಾ ರಿಜಿಸ್ಟರು, ದಾಖಲೆಗಳು ಮತ್ತು ನೋಟೀಸ್‌ಗಳನ್ನು ಪರಿಶೀಲಕನ ಪರಿಶೀಲನೆಗಾಗಿ ಕೇಳಿದ ಕೂಡಲೇ ಹಾಜರುಪಡಿಸತಕ್ಕದ್ದು.

## ಅಧ್ಯಾಯ VIII
## ಅಪರಾಧಗಳು, ದಂಡನೆಗಳು ಮತ್ತು ಪ್ರಕ್ರಿಯೆ

**30. ದಂಡನೆಗಳು.-** (1) ಪ್ರಕರಣ 4, 5, 6, [1][6ಎ][1] 7, 9, 10, 11, 12, 13, 15, 16, [2][x x x][2], 25 ಮತ್ತು 39ರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಮೊದಲನೆಯ ಅಪರಾಧಕ್ಕಾಗಿ [3][ಒಂದು ಸಾವಿರ][3] ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಮತ್ತು ಎರಡನೇ ಅಥವಾ ಯಾವುದೇ ತರುವಾಯದ ಅಪರಾಧಕ್ಕಾಗಿ [3][ಎರಡು ಸಾವಿರ][3] ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 1987ರ ಅಧಿನಿಯಮ 25 ರ ಮೂಲಕ 12.2.1988ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1997ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1997ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಪ್ರಕರಣ 8, 17, 29 ಮತ್ತು 34ರ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ [1][ಎರಡು ನೂರಾ ಐವತ್ತು ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) [2][ಪ್ರಕರಣ 24 ಹಾಗೂ 25ರ][2] ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಮೊದಲ ಅಪರಾಧಕ್ಕಾಗಿ, ಮೂರು ತಿಂಗಳುಗಳಿಗೆ ಕಡಿಮೆಯಿರದಂಥ, ಆದರೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿರದಂಥ, ಆದರೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವೆರಡರಿಂದ ದಂಡಿತನಾಗತಕ್ಕದ್ದು ಮತ್ತು ಎರಡನೇ ಹಾಗೂ

ತರುವಾಯದ ಅಪರಾಧಗಳಿಗಾಗಿ, ಅವನು ಆರು ತಿಂಗಳುಗಳಿಗೆ ಕಡಿಮೆಯಿರದಂಥ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.][1]

1. 1987ರ ಅಧಿನಿಯಮ 25 ರ ಮೂಲಕ 12.2.1988ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2007ರ ಅಧಿನಿಯಮ 12 ರ ಮೂಲಕ ......... ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**31. ಪ್ರಕ್ರಿಯೆ.-** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಅಥವಾ ಆದೇಶಗಳ ಮೇರೆಗಿನ ಯಾವುದೇ ಪ್ರಾಸಿಕ್ಯೂಷನ್‌ನನ್ನು ಪರಿಶೀಲಕನ ಲಿಖಿತ ಫಿರ್ಯಾದಿನ ಮೇಲೆ ಅಲ್ಲದೆ ಹೂಡತಕ್ಕದ್ದಲ್ಲ.

(2) ಎರಡನೇ ದರ್ಜೆಯ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**32. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ.-** ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗಿನ ಯಾವುದೇ ಅಪರಾಧದ ಸಂಜ್ಞಾನವನ್ನು, ಆ ಅಪರಾಧವನ್ನು ಯಾವ ದಿವಸ ಮಾಡಲಾಗಿದೆ ಎಂದು ಹೇಳಲಾಗಿದೆಯೋ, ಆ ದಿವಸದಿಂದ ಆರು ತಿಂಗಳುಗಳ ಒಳಗೆ ಅದರ ಬಗ್ಗೆ ಫಿರ್ಯಾದನ್ನು ಮಾಡಿದ್ದ ಹೊರತು, ತೆಗೆದುಕೊಳ್ಳತಕ್ಕದ್ದಲ್ಲ.

**33. ಪರಿಶೀಲಕರು ಮುಂತಾದವರನ್ನು ಅಡ್ಡಿಪಡಿಸಿದ್ದಕ್ಕಾಗಿ ದಂಡನೆ.-** ಈ ಅಧಿನಿಯಮದ ಮೇರೆಗೆ ತನಗೆ ಪ್ರದತ್ತ ಮಾಡಲಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಪರಿಶೀಲಕನಿಗೆ ಅಥವಾ ಅಂತಹ ಅಧಿಕಾರವನ್ನು ಚಲಾಯಿಸುವಲ್ಲಿ ಪರಿಶೀಲಕನಿಗೆ ಕಾನೂನುಸಮ್ಮತವಾಗಿ ನೆರವು ನೀಡುತ್ತಿರುವ ಯಾರೇ ವ್ಯಕ್ತಿಗೆ, ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುವ ಅಥವಾ ಪರಿಶೀಲಕನು ಮಾಡಿದ ಕಾನೂನುಸಮ್ಮತವಾದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, [1][ಐನೂರು ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 1997 ರ 25ನೇ ಅಧಿನಿಯಮದ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1]**[33-ಎ. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದು.-** ಅಧಿಕಾರವ್ಯಾಪ್ತಿಯುಳ್ಳ ಕಾರ್ಮಿಕ ಅಧಿಕಾರಿಯು, 24ನೇ ಹಾಗೂ 25ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಹೊರತುಪಡಿಸಿ, ಪ್ರಾಸಿಕ್ಯೂಷನ್ ನಡೆಸುವುದಕ್ಕೆ ಬದಲಾಗಿ, ಮೊದಲನೇ ಸಲದ ಅಪರಾಧಕ್ಕಾಗಿ ಎರಡು ಸಾವಿರ ರೂಪಾಯಿಗಳಿಗೆ ಮೀರದ, ಆದರೆ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರದ ಹಾಗೂ ಎರಡನೇ ಅಥವಾ ತರುವಾಯದ ಅಂಥದೇ ಅಪರಾಧಗಳಿಗಾಗಿ, ಐದು ಸಾವಿರ ರೂಪಾಯಿಗಳನ್ನು ಮೀರದ ಆದರೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರದ ಮೊಬಲಗನ್ನು ವಿಧಿಸಿ ಪ್ರಾಸಿಕ್ಯೂಷನ್‌ನನ್ನು ಆರಂಭಿಸುವ ಮೊದಲು ಅಥವಾ ತರುವಾಯ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ತಪ್ಪಿತಸ್ಥ ನಿಯೋಜಕನ ಆಯ್ಕೆಯಂತೆ ರಾಜಿ ಮಾಡಿಕೊಳ್ಳಬಹುದು.][1]

1. 2007 ರ ಅಧಿನಿಯಮ 12 ರ ಮೂಲಕ .................... ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ IX
## ಸಂಕೀರ್ಣ

**34. ರಿಜಿಸ್ಟರುಗಳು ಮತ್ತು ದಾಖಲೆಗಳ ನಿರ್ವಹಣೆ ಮತ್ತು ನೋಟೀಸ್‌ಗಳನ್ನು ಪ್ರದರ್ಶಿಸುವುದು.-** ರಾಜ್ಯ ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೊಳಪಟ್ಟು, ನಿಯೋಜಕನು ನಿಯಮಿಸಬಹುದಾದಂಥ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ನೋಟೀಸ್‌ನ್ನು ಅವನ ಕಾರ್ಯಸಂಸ್ಥೆಯ ಆವರಣದಲ್ಲಿ ಪ್ರದರ್ಶಿಸತಕ್ಕದ್ದು. ಎಲ್ಲಾ ಅಂಥ ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಅವು ಸಂಬಂಧಪಡುವಂಥ ಕಾರ್ಯಸಂಸ್ಥೆಯ ಆವರಣದಲ್ಲಿ ಇಡತಕ್ಕದ್ದು.

**35. ಕೆಲವು ಹಕ್ಕುಗಳ ಮತ್ತು ವಿಶೇಷಾಧಿಕಾರಗಳ ಉಳಿಸುವಿಕೆ.-** ಈ ಅಧಿನಿಯಮದಲ್ಲಿ ಇರುವುದು ಯಾವುದು, ಯಾವುದೇ ಕಾರ್ಯಸಂಸ್ಥೆಯಲ್ಲಿನ ನಿಯೋಜಿತನು, ಅಂಥ ಸಂಸ್ಥೆಗೆ ಅನ್ವಯವಾಗುವ ಯಾವುದೇ ಇತರ ಕಾನೂನು, ಕರಾರು, ರೂಢಿ ಅಥವಾ ಆಚರಣೆಯ ಮೇರೆಗೆ ಅಥವಾ ಅಂಥ ಕಾರ್ಯಸಂಸ್ಥೆಯಲ್ಲಿನ ನಿಯೋಜಕ ಮತ್ತು ನಿಯೋಜಿತನನ್ನು ಬದ್ಧಗೊಳಿಸುವ ಯಾವುದೇ ಐತೀರ್ಪು, ಇತ್ಯರ್ಥ ಅಥವಾ ಒಪ್ಪಂದದ ಮೇರೆಗೆ ಅವನು ಹಕ್ಕುಳ್ಳವನಾಗಿರುವಂಥ ಯಾವುವೇ ಹಕ್ಕುಗಳನ್ನು ಅಥವಾ ವಿಶೇಷ ಅಧಿಕಾರಗಳನ್ನು, ಅಂತಹ ಹಕ್ಕುಗಳು ಅಥವಾ ವಿಶೇಷಾಧಿಕಾರಗಳು ಅವನು ಈ ಅಧಿನಿಯಮದ ಮೇರೆಗೆ ಹಕ್ಕುಳ್ಳವನಾಗಿರಬಹುದಾದಂಥವುಗಳಿಗಿಂಥ ಹೆಚ್ಚು ಅನುಕೂಲಕರವಾಗಿದ್ದರೆ ಅವುಗಳನ್ನು ಬಾಧಿಸತಕ್ಕದ್ದಲ್ಲ.

**36. ರಕ್ಷಣೆ.-** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ, ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**37. ಅಧಿಕಾರಗಳ ಪ್ರತ್ಯಾಯೋಜನೆ.-** ರಾಜ್ಯ ಸರ್ಕಾರವು, ತನಗೆ ಅಧೀನನಾದ ಯಾರೇ ಅಧಿಕಾರಿಯನ್ನು ಅಥವಾ ಪ್ರಾಧಿಕಾರಿಯನ್ನು 1ನೇ ಪ್ರಕರಣದ (3) ಮತ್ತು (4)ನೇ ಉಪ-ಪ್ರಕರಣಗಳು, 3ನೇ ಪ್ರಕರಣದ (3) ಮತ್ತು (4)ನೇ ಉಪ-ಪ್ರಕರಣಗಳ, 19ನೇ ಪ್ರಕರಣ, 20ನೇ ಪ್ರಕರಣ, 21ನೇ ಪ್ರಕರಣ, 26ನೇ ಪ್ರಕರಣ ಮತ್ತು 40ನೇ ಪ್ರಕರಣಗಳ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತನ್ನಲ್ಲಿ ನಿಹಿತವಾದ ಯಾವುದೇ ಒಂದು ಅಥವಾ ಹೆಚ್ಚಿನ ಅಧಿಕಾರಗಳನ್ನು ಚಲಾಯಿಸಲು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳನ್ನು ಚಲಾಯಿಸುವುದು ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ಅದು ಅಧಿಕಾರ ನೀಡಬಹುದಾದಂಥ ವ್ಯಕ್ತಿಗಳ ನಿಯಂತ್ರಣ ಮತ್ತು ಪುನರೀಕ್ಷಣೆಗೆ ಒಳಪಟ್ಟಿರತಕ್ಕದ್ದು. ರಾಜ್ಯ ಸರ್ಕಾರವು ಹಾಗೆ ಅಧಿಕಾರ ನೀಡಿದ ಯಾರೇ ವ್ಯಕ್ತಿಯ ಕಾರ್ಯಗಳು ಮತ್ತು ವ್ಯವಹರಣೆಗಳನ್ನು ನಿಯಂತ್ರಿಸಲು ಮತ್ತು ಪುನರೀಕ್ಷಣೆ ಮಾಡಲು ಸಹ ಅಧಿಕಾರವನ್ನು ಹೊಂದಿರತಕ್ಕದ್ದು.

**38. ಜಾತ್ರೆಗಳು ಮತ್ತು ಹಬ್ಬಗಳ ಕಾಲದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅಮಾನತ್ತಿನಲ್ಲಿಡುವುದಕ್ಕೆ ಸರ್ಕಾರದ ಅಧಿಕಾರ.-** ಜಾತ್ರೆಯ ಅಥವಾ ಹಬ್ಬದ ಅಥವಾ ಮೇಲಿಂದ ಮೇಲೆ ಬರುವ ಸಾರ್ವತ್ರಿಕ ರಜಾದಿನಗಳಿಗೆ ಸಂಬಂಧಪಟ್ಟಂತೆ, ಯಾವುದೇ ವಿಶೇಷ ಸಂದರ್ಭದಲ್ಲಿ

ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಒಂದು ನಿರ್ದಿಷ್ಟ ಅವಧಿಗಾಗಿ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧದ ಪ್ರವರ್ತನೆಯನ್ನು ಅಮಾನತ್ತಿನಲ್ಲಿಡಬಹುದು.

**39. ವಜಾ ನೋಟೀಸು.-** (1) ಯಾರೇ ನಿಯೋಜಕನು, ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಅವನ ಅಧೀನದಲ್ಲಿ ಸೇವೆ ಸಲ್ಲಿಸಿರುವ ನಿಯೋಜಿತನನ್ನು, ಸಮಂಜಸ ಕಾರಣಕ್ಕಾಗಿ ಅಲ್ಲದೆ ಮತ್ತು ಅವನಿಗೆ ಒಂದು ತಿಂಗಳ ಪೂರ್ವ ನೋಟೀಸು ಅಥವಾ ಅದಕ್ಕೆ ಬದಲಾಗಿ ವೇತನವನ್ನು ಕೊಟ್ಟಿದ್ದ ಹೊರತು ಮತ್ತು ಅಲ್ಲಿಯವರೆಗೆ ತೆಗೆದುಹಾಕತಕ್ಕದ್ದಲ್ಲ ಅಥವಾ ವಜಾ ಮಾಡತಕ್ಕದ್ದಲ್ಲ:

ಪರಂತು, ನಿಯೋಜಿತನ ದುರ್ನಡತೆಯನ್ನು, ಆ ಉದ್ದೇಶಕ್ಕಾಗಿ ನಡೆಸಿದ ವಿಚಾರಣೆಯಲ್ಲಿ ರುಜುವಾತಿನೊಂದಿಗೆ ದಾಖಲೆಯಲ್ಲಿ ತಂದಿರುವಲ್ಲಿ, ಅವನು ಆ ನೋಟೀಸಿಗೆ ಅಥವಾ ಅಂತಹ ನೋಟೀಸಿಗೆ ಬದಲಾಗಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಮೇರೆಗೆ ತೆಗೆದುಹಾಕಲಾದ ಅಥವಾ ವಜಾ ಮಾಡಲಾದ ನಿಯೋಜಿತನು [1][ನಿಯಮಿಸಬಹುದಾದಂಥ ಪ್ರದೇಶಗಳ ಮೇಲೆ ಅಥವಾ ನಿಯೋಜಿತರ ಅಂಥ ವರ್ಗಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವಂಥ ಅಧಿಕಾರಿಗಳಿಗೆ][1] ಹಾಗೆ ತೆಗೆದುಹಾಕಿರುವುದಕ್ಕೆ ಅಥವಾ ವಜಾ ಮಾಡಿರುವುದಕ್ಕೆ ಯಾವುದೇ ಸಮಂಜಸ ಕಾರಣವಿರಲಿಲ್ಲ ಅಥವಾ ನಿಯೋಜಕನು ತೀರ್ಮಾನಿಸಿದಂತೆ ತಾನು ದುರ್ನಡತೆಯ ತಪ್ಪಿತಸ್ಥನಾಗಿಲ್ಲವೆಂಬ ಆಧಾರದ ಮೇಲೆ ಅಪೀಲು ಸಲ್ಲಿಸಲು ಹಕ್ಕನ್ನು ಹೊಂದಿರತಕ್ಕದ್ದು.

1. 1966 ರ ಅಧಿನಿಯಮ 36 ರ ಮೂಲಕ 25.4.1969ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಸಮಂಜಸ ಕಾರಣವಿಲ್ಲದೆ ಅಥವಾ ದುರ್ನಡತೆಯ ರುಜುವಾತಿಲ್ಲದೇ, ನಿಯೋಜಿತನನ್ನು ತೆಗೆದುಹಾಕಲಾಗಿದ್ದಲ್ಲಿ ಅಥವಾ ವಜಾ ಮಾಡಲಾಗಿದ್ದಲ್ಲಿ, ಆ ನಿಯೋಜಕನು ಅವನನ್ನು ಮಾಡಲಿದ್ದ ಹುದ್ದೆಯಲ್ಲಿ ಇರಿಸಲು ಒಪ್ಪದಿದ್ದರೆ, ಅಪೀಲು ಪ್ರಾಧಿಕಾರಿಯು ನಿರ್ಧರಿಸಬಹುದಾದಂಥ ನಷ್ಟಪರಿಹಾರಕ್ಕೆ ಅವನು ಹಕ್ಕುಳ್ಳವನಾಗಿರತಕ್ಕದ್ದು: ಪರಂತು, ಅಂಥ ನಷ್ಟಪರಿಹಾರವು ಸೇವೆಯ ಪ್ರತಿಯೊಂದು ವರ್ಷಕ್ಕೆ ಒಂದು ತಿಂಗಳ ವೇತನದಂತೆ ಲೆಕ್ಕ ಹಾಕಿದ ಮೊಬಲಗನ್ನು ಮೀರತಕ್ಕದ್ದಲ್ಲ [1][x x x][1].

1. 1997 ರ ಅಧಿನಿಯಮ 25 ರ ಮೂಲಕ 12.2.1998ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಅಪೀಲು ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂತಹ ಆದೇಶದ ಪುನರೀಕ್ಷಣೆಗಾಗಿ ಜಿಲ್ಲಾ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಮತ್ತು ಅಂತಹ ಅರ್ಜಿ ಸಂಬಂಧದಲ್ಲಿನ ಫಲಿತಾಂಶಕ್ಕೆ ಒಳಪಟ್ಟು ಅಪೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದು ನಿಯೋಜಕ ಮತ್ತು ನಿಯೋಜಿತ ವ್ಯಕ್ತಿ ಇವರಿಬ್ಬರನ್ನು ಬದ್ಧಗೊಳಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ನಷ್ಟಪರಿಹಾರದಂತೆ ಸಂದಾಯವಾಗಬೇಕಾದ ಮೊಬಲಗು 30ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಜುಲ್ಮಾನೆಗೆ ಹೆಚ್ಚುವರಿಯಾಗಿ ಇರತಕ್ಕದ್ದು ಮತ್ತು ಜುಲ್ಮಾನೆಯಂತೆ ವಸೂಲೀಯವಾಗತಕ್ಕದ್ದು.

(6) ಈ ಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಪಡೆದಿರುವ ಯಾರೇ ನಿಯೋಜಿತನು, ಅದೇ ಕ್ಲೇಮಿನ ಬಗ್ಗೆ ಸಿವಿಲ್ ದಾವೆಯನ್ನು ಹೂಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(7) ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಐತೀರ್ಪು, ಕರಾರು ಅಥವಾ ಸೇವಾ ಕರಾರಿನ ನಿಬಂಧನೆಗಳ ಮೇರೆಗೆ, ಯಾರೇ ನಿಯೋಜಿತನು (1)ನೇ ಉಪ-ಪ್ರಕರಣದಲ್ಲಿ ಅಥವಾ (3)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವುದಕ್ಕಿಂತ, ನೋಟೀಸ್‌ನ ಹೆಚ್ಚಿನ ಅವಧಿಗೆ ಅಥವಾ ಇನ್ನೂ ಹೆಚ್ಚಿನ ಅನುಕೂಲಕರ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿದ್ದರೆ, ಸದರಿ ಉಪ-ಪ್ರಕರಣಗಳ ಉಪಬಂಧಗಳು ಈ ಅಧಿನಿಯಮದಲ್ಲಿ, ಅಂಥ ನೋಟೀಸಿನ ಅವಧಿಯನ್ನು ಮತ್ತು ಅಂಥ

ಪ್ರಯೋಜನಗಳನ್ನು ಅಧಿನಿಯಮಿತಿಗೊಳಿಸಿದ್ದರೆ, ಅವು ಹೇಗೆ ಪರಿಣಾಮವುಳ್ಳವುಗಳಾಗಿರುತ್ತಿದ್ದವೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

**40. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ (1)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿಯೋಜಿತರ ಆರೋಗ್ಯ ಮತ್ತು ಸುರಕ್ಷೆ ಮತ್ತು ಕಲ್ಯಾಣದ ಬಗ್ಗೆ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವಲ್ಲಿ, ರಾಜ್ಯ ಸರ್ಕಾರವು, ಯಾವುದೇ ನಿಯಮದ ಉಲ್ಲಂಘನೆಯು [1][ಹತ್ತು ಸಾವಿರ ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೂಲಕ ಪ್ರದತ್ತವಾದ ನಿಯಮ ರಚನಾಧಿಕಾರವು, ನಿಯಮಗಳನ್ನು ಪೂರ್ವ ಪ್ರಕಟಣೆಯ ತರುವಾಯ ರಚಿಸಬೇಕೆಂಬ ಷರತ್ತಿಗೊಳಪಟ್ಟಿದೆ.

1. 2007 ರ ಅಧಿನಿಯಮ 12 ರ ಮೂಲಕ .......... ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**41. ಅಧಿಸೂಚನೆಗಳನ್ನು ಮತ್ತು ನಿಯಮಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವುದು.-** 3ನೇ ಪ್ರಕರಣದ (3)ನೇ ಉಪ-ಪ್ರಕರಣದ ಮತ್ತು (4)ನೇ ಉಪ-ಪ್ರಕರಣದ, 21ನೇ ಪ್ರಕರಣದ (1)ನೇ ಉಪ-ಪ್ರಕರಣ ಮತ್ತು 37ನೇ ಪ್ರಕರಣದ (1)ನೇ ಉಪ-ಪ್ರಕರಣ ಇವುಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 40ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮಗಳನ್ನು, ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆ ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆ ಅಥವಾ ಸಂದರ್ಭಾನುಸಾರ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ಅಧಿಸೂಚನೆಯ ಅಥವಾ ನಿಯಮದ ಮೇರೆಗೆ, ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**42. ನಿರಸನ ಮತ್ತು ಉಳಿಸುವಿಕೆಗಳು.-** [1][ಬೆಳಗಾವಿ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತೆ ಮುಂಬಯಿ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ, 1948 (ಮುಂಬಯಿ ಅಧಿನಿಯಮ 1948 ರ LXXIX), [1][ಗುಲ್ಬರ್ಗಾ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತೆ ಹೈದ್ರಾಬಾದ್ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ, 1951 (ಹೈದ್ರಾಬಾದ್ ಅಧಿನಿಯಮ, 1951 ರ X), [1][ಮಂಗಳೂರು ಹಾಗೂ ಕೊಳ್ಳೇಗಾಲ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತೆ ಮದ್ರಾಸ್ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ, 1947 (ಮದ್ರಾಸ್ ಅಧಿನಿಯಮ 1947 ರ XXXVI) ಮತ್ತು ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮ, 1948 (ಮೈಸೂರು ಅಧಿನಿಯಮ 1948 ರ-II) ಇವುಗಳನ್ನು ಈ ಮೂಲಕ ನಿರಸನಗೊಳಿಸಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 ([1][ಕರ್ನಾಟಕ ಅಧಿನಿಯಮ][1] 1899 ರ III)ರ 6ನೇ ಪ್ರಕರಣವು, ಅಂಥ ನಿರಸನಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು, ಈ ಅಧಿನಿಯಮದ ಮೂಲಕ ಸದರಿ ಅಧಿನಿಯಮಗಳನ್ನು ನಿರಸನಗೊಳಿಸಲಾಗಿದ್ದು ಪುನಃ ಅಧಿನಿಯಮಿತಿಗೊಳಿಸಿದ್ದರೆ ಹೇಗೆ ಅನ್ವಯವಾಗತಕ್ಕದ್ದೋ ಹಾಗೆ ಅನ್ವಯವಾಗತಕ್ಕದ್ದು.

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ 1973 ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**43. ಕೇಂದ್ರ ಅಧಿನಿಯಮ 1942 ರ XVIII ನಿರಸನ.-** ರಾಜ್ಯದ ಯಾವುದೇ ಪ್ರದೇಶಕ್ಕೆ ಈ ಅಧಿನಿಯಮವು ಅನ್ವಯವಾಗುವಂಥ ದಿನಾಂಕದಂದು ಮತ್ತು ಅಂದಿನಿಂದ, ವಾರದ ರಜಾದಿನಗಳ ಅಧಿನಿಯಮ, 1942 (ಕೇಂದ್ರ ಅಧಿನಿಯಮ 1942 ರ XVIII) ಅಂಥ ಪ್ರದೇಶದಲ್ಲಿ ನಿರಸನಗೊಳ್ಳತಕ್ಕದ್ದು:

ಪರಂತು, ಅಂಥ ನಿರಸನವು,-

(ಎ) ಸದರಿ ಅಧಿನಿಯಮಿತಿಯ ಪೂರ್ವ ಪ್ರವರ್ತನೆಯನ್ನು ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡುವುದಕ್ಕೆ ಎಡೆಮಾಡಿಕೊಟ್ಟ ಯಾವುದೇ ಕಾರ್ಯವನ್ನು; ಅಥವಾ

(ಬಿ) ಸದರಿ ಅಧಿನಿಯಮಿತಿಯ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ ಅಥವಾ ಬಾಧ್ಯತೆಯನ್ನು; ಅಥವಾ

(ಸಿ) ಸದರಿ ಅಧಿನಿಯಮಿತಿಯ ವಿರುದ್ಧವಾಗಿ ಎಸಗಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು; ಅಥವಾ

(ಡಿ) ಹಿಂದೆ ಹೇಳಿದಂತೆ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ ಬಾಧ್ಯತೆ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಪಟ್ಟ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು

- ಬಾಧಿಸತಕ್ಕದ್ದಲ್ಲ.

ಮತ್ತು ಈ ಅಧಿನಿಯಮವು ಆ ಪ್ರದೇಶಕ್ಕೆ ಅನ್ವಯಿಸದಿದ್ದರೆ ಹೇಗೆ ಯಾವುದೇ ಅಂಥ ತನಿಖೆ, ಕಾನೂನು ವ್ಯವಹರಣೆಯನ್ನು ಅಥವಾ ಪರಿಹಾರೋಪಾಯವನ್ನು ಹೂಡಬಹುದೋ ಅಥವಾ ಮುಂದುವರಿಸಬಹುದೋ ಅಥವಾ ಜಾರಿಗೊಳಿಸಬಹುದೋ ಮತ್ತು ಯಾವುದೇ ಅಂಥ ದಂಡನೆ ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದೋ ಹಾಗೆ ಹೂಡಬಹುದು ಅಥವಾ ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಅಥವಾ ವಿಧಿಸಬಹುದು.

**44. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಸದರಿ ಉಪಬಂಧಗಳಿಗೆ ಪರಿವರ್ತನೆಗೊಳಿಸುವ ಪರಿಣಾಮವಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವೆಂದು ತನಗೆ ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು.

## ಅನುಸೂಚಿ

[1ನೇ ಪ್ರಕರಣದ (4) ನೇ ಉಪ-ಪ್ರಕರಣವನ್ನು ನೋಡಿ]

## ಸ್ಥಳಗಳ ಹೆಸರುಗಳು

| | | | |
|---|---|---|---|
| 1. | ಅರಸೀಕೆರೆ ಪಟ್ಟಣ | 41. | ಕಾರ್ಕಳ |
| 2. | ಅಥಣಿ | 42. | ಕಾರವಾರ |
| 3. | ಬಾಗಲಕೋಟೆ | 43. | ಕೋಲಾರ ಪಟ್ಟಣ |
| 4. | ಬೆಂಗಳೂರು ನಗರ | 44. | ಕೋಲಾರ ಚಿನ್ನದ ಗಣಿ ಪ್ರದೇಶ |
| 5. | ಬಂಗಾರಪೇಟೆ ಪಟ್ಟಣ | 45. | ಕೊಳ್ಳೇಗಾಲ |
| 6. | ಬಂಟ್ವಾಳ | 46. | ಕೊಪ್ಪಳ |
| 7. | ಬೆಳಗಾವಿ | 47. | ಕೊಟ್ಟೂರು ಪಂಚಾಯಿತಿ ಪ್ರದೇಶ |
| 8. | ಬೆಳ್ತಂಗಡಿ | 48. | ಕೂಡ್ಲಿಗಿ ಪಂಚಾಯಿತಿ ಪ್ರದೇಶ |
| 9. | ಬಳ್ಳಾರಿ ನಗರ | 49. | ಮದ್ದೂರು |
| 10. | ಭದ್ರಾವತಿ ಪಟ್ಟಣ | 50. | ಮಹಾಲಿಂಗಪುರ |
| 11. | ಬೀದರ್ | 51. | ಮಳವಳ್ಳಿ |
| 12. | ವಿಜಯಪುರ | 52. | ಮಂಡ್ಯ ಪಟ್ಟಣ |
| 13. | ಚಾಮರಾಜನಗರ ಪಟ್ಟಣ | 53. | ಮಧುಗಿರಿ ಪಟ್ಟಣ |
| 14. | ಚನ್ನಪಟ್ಟಣ | 54. | ಮಂಗಳೂರು |
| 15. | ಚಳ್ಳಕೆರೆ ಪಟ್ಟಣ | 55. | ಮೂಡಬಿದ್ರಿ |
| 16. | ಚಿಕ್ಕಬಳ್ಳಾಪುರ ಪಟ್ಟಣ | 56. | ಮುಲ್ಕಿ |
| 17. | ಚಿಕ್ಕಮಗಳೂರು ಪಟ್ಟಣ | 57. | ಮೈಸೂರು ನಗರ |
| 18. | ಚಿಂತಾಮಣಿ ಪಟ್ಟಣ | 58. | ನಂಜನಗೂಡು ಪಟ್ಟಣ |
| 19. | ಚಿತ್ರದುರ್ಗ ಪಟ್ಟಣ | 59. | ನಿಪ್ಪಾಣಿ |
| 20. | ಕುಂದಾಪುರ | 60. | ಪುತ್ತೂರು. |
| 21. | ದಾವಣಗೆರೆ ನಗರ | 61. | ರಬಕವಿ - ಬನಹಟ್ಟಿ |
| 22. | ಧಾರವಾಡ | 62. | ರಾಯಚೂರು |
| 23. | ದೊಡ್ಡಬಳ್ಳಾಪುರ ಪಟ್ಟಣ | 63. | ರಾಮನಗರ |
| 24. | ಗದಗ್- ಬೆಟಗೇರಿ | 64. | ಸಾಗರ |
| 25. | ಗೌರಿಬಿದನೂರು ಪಟ್ಟಣ | 65. | ಸಕಲೇಶಪುರ ಪಟ್ಟಣ |
| 26. | ಗೋಕಾಕ್ | 66. | ಸಂಡೂರು |
| 27. | ಗುಲ್ಬರ್ಗ | 67. | ಷಹಾಬಾದ್ |
| 28. | ಗುಳೇದಗುಡ್ಡ | 68. | ಶಿಕಾರಿಪುರ |
| 29. | ಹಡಗಲಿ ಪಂಚಾಯಿತಿ | 69. | ಶಿವಮೊಗ್ಗ ಪಟ್ಟಣ |
| 30. | ಹಾರ್ನಹಳ್ಳಿ ಪಂಚಾಯಿತಿ ಪ್ರದೇಶ | 70. | ಶಿಡ್ಲಘಟ್ಟ |
| 31. | ಹರಿಹರ ಪಟ್ಟಣ | 71. | ಶಿರಾ ಪಟ್ಟಣ |
| 32. | ಹಾಸನ ಪಟ್ಟಣ | 72. | ಸಿರಸಿ |
| 33. | ಹಿರಿಯೂರು | 73. | ಸಿರಗುಪ್ಪ ಪಂಚಾಯಿತಿ ಪ್ರದೇಶ |
| 34. | ಹೊಸಪೇಟೆ ಪಟ್ಟಣ | 74. | ಶ್ರೀನಿವಾಸಪುರ |
| 35. | ಹುಬ್ಬಳ್ಳಿ | 75. | ಶ್ರೀರಂಗಪಟ್ಟಣ |
| 36. | ಇಳಕಲ್ | 76. | ತೀರ್ಥಹಳ್ಳಿ |

| | | | |
|---|---|---|---|
| 37. | ಜಮಖಂಡಿ | 77. | ತಿಪಟೂರು ಪಟ್ಟಣ |
| 38. | ಕಮಲಾಪುರ ಪಂಚಾಯಿತಿ ಪ್ರದೇಶ | 78. | ತುಮಕೂರು ಪಟ್ಟಣ |
| 39. | ಕಂಪ್ಲಿ ಪಂಚಾಯಿತಿ ಪ್ರದೇಶ | 79. | ಉಡುಪಿ |
| 40. | ಕನಕಪುರ | 80. | ಯಾದಗಿರಿ |

************

The above translation of the Karnataka Shops and Commercial Establishments Act, 1961ರ (Karnataka Act 08 of 1962) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

**ಅಧಿಸೂಚನೆಗಳು**

**I**

**ಬೆಂಗಳೂರು, ದಿನಾಂಕ 29ನೇ ಆಗಸ್ಟ್ 1964 [ಸಂ.ಪಿಎಲ್ಎಮ್ 119 ಎಲ್ಇಟಿ 64]**

**ಎಸ್.ಒ.ಸಂಖ್ಯೆ. 1195.-** ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಮೈಸೂರು ಅಧಿನಿಯಮ 3)ರ 31ನೇ ಪ್ರಕರಣವನ್ನು ಓದಿಕೊಂಡಂತೆ ಹಾಗೂ ಅಧಿಸೂಚನೆ ಸಂ.ಐಪಿಎಮ್ 119 ಎಲ್ಇಟಿ 64, ದಿನಾಂಕ 29ನೇ ಮೇ, 1964ರಲ್ಲಿ ಮಾರ್ಪಾಡು ಮಾಡಿದಂತೆ, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ 8)ರ 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ 8) ಅನ್ನು 1964ರ ಅಕ್ಟೋಬರ್ 1ನೇ ದಿನದಂದು ಜಾರಿಗೆ ಬರತಕ್ಕದ್ದು ಎಂದು ನಿರ್ದಿಷ್ಟಪಡಿಸುತ್ತದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ), ಭಾಗ IV 2ಸಿ(ii) ದಿನಾಂಕ: 29ನೇ ಆಗಸ್ಟ್ 1964 ರಲ್ಲಿ ಸಂಖ್ಯೆ 220 ಎಂದು ಪ್ರಕಟಿಸಲಾಗಿದೆ)

**II**

**ಬೆಂಗಳೂರು, ದಿನಾಂಕ 16ನೇ ಏಪ್ರಿಲ್, 1969 [ಸಂ. ಎಫ್‌ಸಿಎಲ್ 10 ಎಲ್‌ಎಸ್‌ಸಿ 69]**

**ಎಸ್.ಒ.ಸಂಖ್ಯೆ. 738.-** ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1966 (1966ರ ಮೈಸೂರು ಅಧಿನಿಯಮ ಸಂ.36)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಈ ಮೂಲಕ 1969 ರ ಏಪ್ರಿಲ್ 25ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಿ. ಜಿ. ಪುರೋಹಿತ್)
ಅಧೀನ ಕಾರ್ಯದರ್ಶಿ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ), ಭಾಗ IV 2ಸಿ(ii) ದಿನಾಂಕ: 24ನೇ ಏಪ್ರಿಲ್ 1969 ರಲ್ಲಿ, ಪುಟ ಸಂಖ್ಯೆ 1858 ಎಂದು ಪ್ರಕಟಿಸಲಾಗಿದೆ)

**III**

**ಬೆಂಗಳೂರು, ದಿನಾಂಕ 7ನೇ ಮೇ 1969 [ಸಂ. ಎಫ್‌ಸಿಎಲ್ 12 ಎಲ್‌ಎಸ್‌ಸಿ 69]**

**ಎಸ್.ಒ.ಸಂಖ್ಯೆ. 932.-** ಮೈಸೂರು ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1969 (1969 ರ ಮೈಸೂರು ಅಧಿನಿಯಮ ಸಂ.4)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಈ ಮೂಲಕ 1969 ರ ಮೇ 16ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಜಿ. ಜಿ. ಪುರೋಹಿತ್)
ಅಧೀನ ಕಾರ್ಯದರ್ಶಿ.

(ಕರ್ನಾಟಕ ರಾಜ್ಯಪತ್ರ ಭಾಗ IV 2ಸಿ(ii) ದಿನಾಂಕ: 15ನೇ ಮೇ 1969ರಲ್ಲಿ, ಪುಟ ಸಂಖ್ಯೆ 2263 ಎಂದು ಪ್ರಕಟಿಸಲಾಗಿದೆ)

**IV**

**ಬೆಂಗಳೂರು, ದಿನಾಂಕ 4ನೇ ಡಿಸೆಂಬರ್ 1982,**
**[ಸಂ. ಎಸ್‌ಡಬ್ಲ್ಯೂಎಲ್ 6 ಎಲ್‌ಎಸ್‌ಸಿ 82 (ಪಿ.II)]**

**ಎಸ್.ಒ.ಸಂಖ್ಯೆ. 2735.-** ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1982 (1982 ರ ಕರ್ನಾಟಕ ಅಧಿನಿಯಮ, ಸಂ.33)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ 1982 ರ ಡಿಸೆಂಬರ್ ನಾಲ್ಕನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಅಧಿಸೂಚಿಸುತ್ತದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ), ಭಾಗ IV 2ಎ ದಿನಾಂಕ: 4ನೇ ಡಿಸೆಂಬರ್ 1982 ರಲ್ಲಿ, ಪುಟ ಸಂಖ್ಯೆ. 849 ಎಂದು ಪ್ರಕಟಿಸಲಾಗಿದೆ)

**V**

**ಬೆಂಗಳೂರು, ದಿನಾಂಕ 31ನೇ ಅಕ್ಟೋಬರ್ 1997, [ಸಂ.30 ಎಲ್ಎಸ್‌ಸಿ 97]**

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ಕಾಯಿದೆ, 1997 (ಕರ್ನಾಟಕ ಕಾಯಿದೆ ಸಂಖ್ಯೆ:25-1997) ತಕ್ಷಣದಿಂದ ಜಾರಿಗೆ ಬರುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಲ. ನಾ. ಸಾಲಂಕೆ
ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

(ಕರ್ನಾಟಕ ರಾಜ್ಯಪತ್ರ, ಗುರುವಾರ ದಿನಾಂಕ: 12ನೇ ಫೆಬ್ರುವರಿ 1998 ರ ಭಾಗ IV-2ಸಿ(ii) ರಲ್ಲಿ ಪ್ರಕಟಿಸಲಾಗಿದೆ.)

**VI**

**ಬೆಂಗಳೂರು, ದಿನಾಂಕ 1ನೇ ಜೂನ್ 2001, [ಸಂ. ಎಲ್‌ಡಿ 188 ಎಲ್‌ಇಟಿ 99(ಪಿ)]**

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2001 (2001ರ ಕರ್ನಾಟಕ ಅಧಿನಿಯಮ, 11)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ 2001ರ ಜೂನ್ ಮೊದಲನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಬಿ.ಎಚ್. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**VII**

**ಬೆಂಗಳೂರು, ದಿನಾಂಕ 8ನೇ ನವೆಂಬರ್ 2002, [ಸಂ. ಎಲ್‌ಡಿ 237 ಇಟಿ 2002]**

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2002 (2002ರ ಕರ್ನಾಟಕ ಅಧಿನಿಯಮ 14)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ 2002ರ ನವೆಂಬರ್ 2ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ.ಎಂ. ಮಠಪತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

(ಕರ್ನಾಟಕ ರಾಜ್ಯಪತ್ರ ಭಾಗ IV-ಎ ದಿನಾಂಕ: 12.12.2002ರಲ್ಲಿ ಪ್ರಕಟಿಸಲಾಗಿದೆ)

**VIII**

**ಬೆಂಗಳೂರು, ದಿನಾಂಕ 26ನೇ ಆಗಸ್ಟ್ 2008, [ಸಂ. ಎಲ್‌ಡಿ 258 ಎಲ್‌ಇಟಿ 2007]**

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ, 12)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ 2008ರ ಅಕ್ಟೋಬರ್ 1ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಯು.ಎನ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**2020 ರ ಕರ್ನಾಟಕ ಅಧಿನಿಯಮ ಸಂಖ್ಯೆ. 40**

(2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020**

(2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ 08)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ.-** ಈ ಅಧಿನಿಯಮವನ್ನು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

2. ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದಲ್ಲಿ 25ನೇ ಪ್ರಕರಣವನ್ನು ಸೇರಿಸಲಾಗಿದೆ.

## 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ. 08

(2021ರ ಫೆಬ್ರುವರಿ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

## ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2020

(2021ರ ಫೆಬ್ರುವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 8) ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 8) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 15ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 8) 15ನೇ ಪ್ರಕರಣದ (7)ನೇ ಉಪಪ್ರಕರಣದ ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಮುಂದೆ ಬರುವ ವರ್ಷಕ್ಕೆ ಉಳಿಸಿಕೊಂಡು ಹೋಗಬಹುದಾದ ರಜಾ ದಿನಗಳ ಒಟ್ಟು ಸಂಖ್ಯೆಯು ನಲವತ್ತೈದು ದಿವಸಗಳನ್ನು ಮೀರತಕ್ಕದ್ದಲ್ಲ."

The above translation of the Karnataka Shops and Commercial Establishments (Second Amendment) Act, 2020 (Karnataka Act 08 of 2021) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ವಜುಬಾಯಿ ವಾಲ
ಕರ್ನಾಟಕ ರಾಜ್ಯ ಪಾಲರು

ಕರ್ನಾಟಕ ರಾಜ್ಯ ಪಾಲರ ಆದೇಶಸಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

************